ಹಣತೆ ಘನತೆ

ಶತಮಾನದ ಹಿರಿಯರಿಗೆ ನಮನ

ಶೇಷಾದ್ರಿಪುರಂ ಕಾಲೇಜು

ಬೆಂಗಳೂರು-೨೦

ಹಣತೆ ಘನತೆ

ಶತಮಾನದ ಹಿರಿಯರಿಗೆ ನಮನ

ಶೇಷಾದ್ರಿಪುರಂ ಕಾಲೇಜು

ಬೆಂಗಳೂರು-೨೦

ಹಣತೆ ಘನತೆ : ಶತಮಾನದ ಹಿರಿಯರಿಗೆ ನಮನ - ಪರಿಚಯ ಪುಸ್ತಕ
ಪ್ರಕಾಶಕರು : ಶೇಷಾದ್ರಿಪುರಂ ಕಾಲೇಜು, ಬೆಂಗಳೂರು-೨೦

ಪ್ರಧಾನ ಸಂಪಾದಕರು : **ಪ್ರೊ। ಕೆ. ಈ. ರಾಧಾಕೃಷ್ಣ**

ಸಂಪಾದಕರು : **ಪ್ರೊ। ಜಿ. ಕೃಷ್ಣವೇಣಿ**
ಡಾ। ನರಹಳ್ಳಿ ಬಾಲಸುಬ್ರಹ್ಮಣ್ಯ

ನೆರವು : **ಹೇಮ ಹೆಬ್ಬಗೋಡಿ**
ರೂಪವತಿ

ಪುಟಗಳು : 40

ಬೆಲೆ : 20 ರೂ.

ಮುದ್ರಣ :
ನೇತ್ರಾ ಪ್ರಿಂಟರ್ಸ್
ಬೆಂಗಳೂರು–560 018

ಮುನ್ನುಡಿ

ಶೇಷಾದ್ರಿಪುರಂ ಶಿಕ್ಷಣದತ್ತಿ ೧೯೩೦ರಿಂದ ಕಾರ್ಯಾರಂಭ ಮಾಡಿದೆ. ೧೪ ಬೇರೆ ಬೇರೆ ಸಂಸ್ಥೆಗಳನ್ನು ನಡೆಸುತ್ತಿದೆ. ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣದಾಸೋಹ ನಡೆಸುತ್ತಿದೆ. ಈ ಸಂಸ್ಥೆ ಹೀಗೆ ಬೆಳೆಯಲು ಅನೇಕ ಮಂದಿ ಸ್ಥಾಪಕ ಸದಸ್ಯರ, ಆಡಳಿತ ಮಂಡಳಿಯವರ, ಅಧ್ಯಾಪಕರ, ಉದ್ಯೋಗಿಗಳ, ವಿದ್ಯಾರ್ಥಿಗಳ, ಪೋಷಕರ ಅವಿರತ ದುಡಿಮೆ ಕಾರಣ.

ನಮ್ಮ ದತ್ತಿಯ ಆಶ್ರಯದ ಸಂಸ್ಥೆಗಳಲ್ಲಿ ಶೇಷಾದ್ರಿಪುರಂ ಕಾಲೇಜು ನಮ್ಮ ರಾಜ್ಯದಲ್ಲೇ ಸೃಜನಶೀಲ ವಿದ್ಯಾರ್ಥಿಗಳನ್ನು ರೂಪಿಸುವ ಒಂದು ಕಾಲೇಜೆಂದು ಹೆಸರಾಗಿರುವುದು ನಮಗೆ ಹೆಮ್ಮೆಯ ವಿಷಯ. ಈ ಕಾಲೇಜು ನಮಗೆ ಗೌರವವನ್ನು ತಂದಿದೆ. ಇಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ವಿಷಯಗಳಲ್ಲಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಇದಕ್ಕೆ ಕಾರಣ ಸಮರ್ಪಿತ ಭಾವದ ಅಧ್ಯಾಪಕರು ಮತ್ತು ಉದ್ಯೋಗಿಗಳು, ಅವರನ್ನು ನಾನು ಅಭಿನಂದಿಸುತ್ತೇನೆ.

ಈ ಶತಮಾನದ ಹಿರಿಯಚೇತನಗಳಾದ ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ನಿಟ್ಟೂರು ಶ್ರೀನಿವಾಸರಾಯರು, ಶ್ರೀ ಎ. ಎಸ್. ಮೂರ್ತಿರಾವ್ ಅವರು, ಡಾ|| ಎಚ್. ನರಸಿಂಹಯ್ಯ, ಶ್ರೀಮತಿ ಮಹಾದೇವಿ ತಾಯಿ, ಡಾ|| ಎಂ. ಸಿ. ಮೋದಿ, ಶ್ರೀ ಸುಧಾಕರ ಚತುರ್ವೇದಿ, ಶ್ರೀ ಎಸ್. ಕೆ. ಕರೀಂಖಾನ್, ಶ್ರೀ ಆರ್. ಕೆ. ಶ್ರೀಕಂಠನ್, ಶ್ರೀ ಎನ್. ಲಕ್ಷ್ಮಣ್‌ರಾವ್, ಶ್ರೀ ಎಂ. ಪಿ. ಎಲ್. ಶಾಸ್ತ್ರಿ, ಶ್ರೀ ಎಚ್. ಎಲ್. ನಾಗೇಗೌಡ, ಶ್ರೀ ಸತೀಶ್‌ಧವನ್ ಅವರುಗಳ ಬಗ್ಗೆ ತಂದಿರುವ ಪುಸ್ತಕಕ್ಕೆ ಕಾರಣರು ಕನ್ನಡ ವಿಭಾಗದ ಮುಖ್ಯಸ್ಥರಾದ, ವಿಮರ್ಶಕ, ಡಾ|| ನರಹಳ್ಳಿ ಬಾಲಸುಬ್ರಮಣ್ಯ ಅವರು. ಅವರಿಗೆ ಸಲಹೆ ಸಹಕಾರವಿತ್ತವರು ಪ್ರೊ. ಕೃಷ್ಣವೇಣಿ ಮತ್ತು ಶ್ರೀ ಗೀತಾಚಾರ್ಯ ಮತ್ತು ಎಲ್ಲಾ ಅಧ್ಯಾಪಕರುಗಳು, ಅವರಿಗೆ ನನ್ನ ಶುಭಾಶಯಗಳು. ಈ ಎಲ್ಲಾ ಕೆಲಸಗಳ ಹಿಂದಿರುವವರು ಪ್ರಾಂಶುಪಾಲರಾದ ಪ್ರೊ. ಕೆ. ಈ. ರಾಧಾಕೃಷ್ಣ ಅವರು, ನಮ್ಮ ಬಳಗದವರೇ ಆದ ಅವರಿಗೆ 'ಮೆಚ್ಚುಗೆ' ಸೂಚಿಸುವುದು ಮಾತ್ರ ನಮ್ಮ ಕೆಲಸ.

ಈ ಪುಸ್ತಿಕೆಯಲ್ಲಿ ಚಿತ್ರಿತವಾದ ಹಿರಿಯರ ಜೀವನ-ಸಾಧನೆ, ನಮ್ಮೆಲ್ಲರಿಗೆ- ಅದರಲ್ಲೂ ಯುವಕರಿಗೆ ಪ್ರೇರಕವಾದರೆ ನಮ್ಮ ಪ್ರಯತ್ನ ಸಾರ್ಥಕ.

ಟಿ. ವಿ. ಮಾರುತಿ
ಅಧ್ಯಕ್ಷರು
ಶೇಷಾದ್ರಿಪುರಂ ಶಿಕ್ಷಣ ದತ್ತಿ

ಪುಸ್ತಕ ಓದುವ ಮುನ್ನ

ಕಾಲಗಣನೆ ಒಂದು ಸೂಕ್ಷ್ಮವಾದ ಸಂಗತಿ. ಋತುಮಾನದ ಮತ್ತು ಸಾಮಾಜಿಕ ಬದಲಾವಣೆಗೆ ತಕ್ಕಂತೆ ಕಾಲವನ್ನು ವಿಂಗಡಿಸುವ ಪದ್ಧತಿಯಿಂದಾದ ಕಾಲವನ್ನು 'ಮಾನ' ಪದ್ಧತಿಯಲ್ಲಿ ಅಳೆಯಲಾರಂಭಿಸಿದೆವು. ದಶಮಾನಗಳು, ಶತಮಾನಗಳು, ಸಹಸ್ರಮಾನಗಳು ಕಾಲಕ್ಕೆ ತಿರುವು ಕೊಡುವ ಒಂದು ಹಬ್ಬದಂತೆ ಆಚರಿಸುವ ಸಂಕ್ರಾಂತಿಯಾದವು. ಪ್ರಜ್ಞಾವಂತರು, ಸಮಾಜಶಾಸ್ತ್ರಜ್ಞರು ಈ ಕಾಲ ಪರಿಧಿಯನ್ನು ಆ ಕಾಲದಲ್ಲಿ ನಡೆದ ಮುಖ್ಯ ಘಟನೆಗಳನ್ನು ವಿಶ್ಲೇಷಿಸಿ ದಾಖಲಿಸಲು ಆರಂಭಿಸಿದರು.

ನಾಗರೀಕ ಯುಗದ ಕಳೆದ ನಾಲ್ಕು ಶತಮಾನಗಳು ಮನುಷ್ಯನ ಚರಿತ್ರೆಯಲ್ಲಿ ಬಹು ಮುಖ್ಯವಾದವು. ಆತನ ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ, ಸಾಮಾಜಿಕ ಸೇವೆಗಳು ಬದಲಾವಣೆಗಳು ಭದ್ರತೆಗಳಿಗೆ ಒಳಪಟ್ಟು ಸಿದ್ಧಾಂತಗಳೆಲ್ಲ ಹೊಸ ಹೊಸ ಅರ್ಥಗಳನ್ನು ಪಡೆದುಕೊಂಡವು. ಬದುಕಿನ ಕ್ರಮ, ರೀತಿ ರಿವಾಜುಗಳು, ಶೈಲಿಗಳು ಬದಲಾವಣೆಯಾದವು. ಅದರಲ್ಲೂ ಇಪ್ಪತ್ತನೆಯ ಶತಮಾನದಲ್ಲಾದ ಬದಲಾವಣೆ ಬೆರಗುಗೊಳಿಸುವಂತಹುದು. ಬದುಕಿನಲ್ಲಿ ಯಶಸ್ಸು ಗಳಿಸುವುದು ಮಾತ್ರ ಪರಮಗುರಿ ಎಂದು, ಜನ ನಂಬುವಂತೆ ತಾಂತ್ರಿಕ ಜ್ಞಾನ ಹೊಸ ಸಮಾಜವನ್ನು ಸೃಷ್ಟಿಸಿತು.

ಇಪ್ಪತ್ತನೆಯ ಶತಮಾನದಿಂದ ಇಪ್ಪತ್ತೊಂದಕ್ಕೆ ಕಾಲಿಡುವ ಸಂದರ್ಭದಲ್ಲಿ ಈ ಎಲ್ಲಾ ಬದಲಾವಣೆಗಳು ಅನೇಕರು ಪದತಲದ ಮಣ್ಣನ್ನು ಸೆಳೆದು, ನೆಲ ಕುಸಿಯುವಂತೆ ಮಾಡಿತು. ಅನೇಕ ಮಂದಿ ಹಿರಿಯರು, ಈ ಬದಲಾವಣೆಗಳು ತಾವು ನಂಬಿದ ಮೌಲ್ಯಗಳನ್ನು ನಾಶಮಾಡಲು ಎಂದೂ ಬಿಡಲಿಲ್ಲ. ಅಧಿಕಾರ ಲಾಲಸೆ, ಭ್ರಷ್ಟತೆ, ದ್ವಂದ್ವಗಳಿಗೆ ಅನೇಕರು ಬಲಿಯಾದರೆ, ಸಾಧನೆಯಲ್ಲೂ ಎತ್ತರಕ್ಕೇರಿದ ಈ ಮಹನೀಯರು ಬದುಕಿನ ನಡವಳಿಕೆಗಳಲ್ಲೂ ಅಷ್ಟೇ ಎತ್ತರಕ್ಕೆ ಏರಿದವರು. ಅಂತಹ ಕೆಲವು ಮಹನೀಯರು ಈ ಶತಮಾನದ ಯಶಸ್ಸು ಮತ್ತು ಮುಖ್ಯ ಮಾನವೀಯ ಮೌಲ್ಯಗಳೆರಡನ್ನೂ ತಮ್ಮಲ್ಲಿ ಉಳಿಸಿಕೊಂಡು ಯಾವ ಆಶೆ-ಆಮಿಷಗಳಿಗೆ ಬಗ್ಗದೆ ತಮ್ಮ ಅಧಿಕಾರಗಳನ್ನು ಎಂದೂ ದುರುಪಯೋಗಪಡಿಸದೆ "ಸಮಾಜಾರ್ಪಣಮಸ್ತು" ಎಂದು ತಮ್ಮ ಬದುಕನ್ನು ಸಮಾಜಕ್ಕೆ ಕೊಟ್ಟಿದ್ದಾರೆ.

ಶ್ರೀ ನಿಜಲಿಂಗಪ್ಪ, ಶ್ರೀ ನಿಟ್ಟೂರು ಶ್ರೀನಿವಾಸರಾವ್, ಶ್ರೀ ಎ. ಎನ್. ಮೂರ್ತಿರಾವ್, ಡಾ|| ಎಚ್. ನರಸಿಂಹಯ್ಯ, ಶ್ರೀಮತಿ ಮಹಾದೇವಿ ತಾಯಿ, ಡಾ|| ಎಂ. ಸಿ. ಮೋದಿ, ಶ್ರೀ ಸುಧಾಕರ ಚತುರ್ವೇದಿ, ಶ್ರೀ ಎಸ್. ಕೆ. ಕರೀಂಖಾನ್, ಶ್ರೀ ಆರ್. ಕೆ. ಶ್ರೀಕಂಠನ್, ಶ್ರೀ ಎನ್. ಲಕ್ಷ್ಮಣ್‌ರಾವ್, ಶ್ರೀ ಎಂ.ಪಿ.ಎಲ್. ಶಾಸ್ತ್ರೀ, ಶ್ರೀ ಎಚ್. ಎಲ್. ನಾಗೇಗೌಡ, ಶ್ರೀ ಸತೀಶ್‌ಧವನ್ ಇಂತಹ ಹಿರಿಯರು ತಮ್ಮ ಕ್ಷೇತ್ರಗಳು ಮತ್ತು ತಮ್ಮ ಬದುಕು ಎರಡರಲ್ಲೂ ಔನ್ನತ್ಯವನ್ನು ಸಾಧಿಸಿ, ಎರಡರಲ್ಲೂ ಯುವ ಪೀಳಿಗೆಗೆ "ಮಾರ್ಗದರ್ಶನ"ದ ಹಕ್ಕನ್ನು ಪಡೆದುಕೊಂಡವರು.

ಯುವ ಪೀಳಿಗೆಯನ್ನು ರೂಪಿಸುತ್ತಿರುವ ಒಂದು ಕಾಲೇಜು, ಇಂತಹ ಮಹನೀಯರಿಗೆ ನಮಿಸುವುದು ನಮ್ಮ ಕರ್ತವ್ಯ ಎಂದು ನಾವು ಭಾವಿಸಿದ್ದೇವೆ. ಈ ಮಹನೀಯರಿಗೆ ಪುಸ್ತಕ ರೂಪದ ನಮನವೇ - "ಹಣತೆ-ಘನತೆ". ನಮ್ಮೆಲ್ಲರ ಬದುಕಿಗೆ ಈ ಹಿರಿಯರು ಬೆಳಕಾಗಲಿ ಎಂಬ ಉದ್ದೇಶ ನಮ್ಮದು.

ಪ್ರೊ. ಕೆ. ಈ. ರಾಧಾಕೃಷ್ಣ
ಪ್ರಾಂಶುಪಾಲರು

ಪರಿವಿಡಿ

ಎಸ್. ನಿಜಲಿಂಗಪ್ಪ / ೧೧

ಎ. ಎನ್. ಮೂರ್ತಿರಾವ್ / ೧೩

ನಿಟ್ಟೂರು ಶ್ರೀನಿವಾಸರಾವ್ / ೧೫

ಎಚ್. ನರಸಿಂಹಯ್ಯ / ೧೭

ಮಹದೇವಿತಾಯಿ / ೧೯

ಸುಧಾಕರ ಚತುರ್ವೇದಿ / ೨೧

ಎಂ. ಸಿ. ಮೋದಿ / ೨೩

ಎಂ. ಪಿ. ಎಲ್. ಶಾಸ್ತ್ರಿ / ೨೫

ಆರ್. ಕೆ. ಶ್ರೀಕಂಠನ್ / ೨೭

ಎಸ್. ಕೆ. ಕರೀಂಖಾನ್ / ೨೯

ಎನ್. ಲಕ್ಷ್ಮಣರಾವ್ / ೩೧

ಸತೀಶ್ ಧವನ್ / ೩೩

ಹೆಚ್. ಎಲ್. ನಾಗೇಗೌಡ / ೩೫

ಹಣತೆ ಘನತೆ

ಎಸ್. ನಿಜಲಿಂಗಪ್ಪ

ನವ ಕರ್ನಾಟಕದ ಶಿಲ್ಪಿ ಎಂದೇ ಪ್ರಸಿದ್ಧರಾಗಿರುವ ಸಿದ್ಧವನಹಳ್ಳಿ ನಿಜಲಿಂಗಪ್ಪನವರು ಭಾರತೀಯ ರಾಜಕಾರಣದಲ್ಲಿ ವಿಶಿಷ್ಟ ವ್ಯಕ್ತಿತ್ವ ಪಡೆದ ಮಹತ್ವದ ವ್ಯಕ್ತಿಯಾಗಿದ್ದಾರೆ. ಇಡೀ ಶತಮಾನದ ಭಾರತೀಯ ರಾಜಕಾರಣಕ್ಕೆ ಸಾಕ್ಷಿ ಪ್ರಜ್ಞೆಯಂತಿರುವ ನಿಜಲಿಂಗಪ್ಪನವರು ಜನಸಿದ್ದು ೧೯೦೨ನೇ ಇಸವಿ ಡಿಸೆಂಬರ್ ೧೦ರಂದು. ೯೯ ವರ್ಷಗಳ ಮಾಗಿದ ವ್ಯಕ್ತಿತ್ವದ ಎಸ್.ಎನ್. ರವರು ನಮ್ಮ ನಡುವೆ ಇರುವ ಹಿರಿಯ ರಾಜಕೀಯ ಮುತ್ಸದ್ದಿ.

ಬಡರೈತ ಕುಟುಂಬದಿಂದ ಬಂದ ನಿಜಲಿಂಗಪ್ಪನವರದು ಉದ್ದಕ್ಕೂ ಹೋರಾಟದ ಬದುಕು. ಚಿಕ್ಕಂದಿನಲ್ಲಿ ಬಡತನದ ವಿರುದ್ಧ ಹೋರಾಟ ಮಾಡಿದರೆ ನಂತರ ತಮ್ಮದೇ ಆದ ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ, ಅನಂತರ ನಂಬಿದ ಮೌಲ್ಯಕ್ಕಾಗಿ ನಿಜಲಿಂಗಪ್ಪನವರು ಹೋರಾಟ ಮಾಡುತ್ತಲೇ ಬಂದರು. ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡ ಇವರನ್ನು ತಾಯಿ ನೀಲಮ್ಮ ನವರು ಅಕ್ಕರೆಯಿಂದಲೇ ಬೆಳೆಸಿದರು. ಅಗತ್ಯ ವಿದ್ಯಾಭ್ಯಾಸ ಕೊಡಿಸಲು ಪ್ರಯತ್ನಿಸಿದರು. ಮಗ ಮುಂದೆ ಮಹಾನ್ ವ್ಯಕ್ತಿಯಾಗಬೇಕೆಂಬ ಕನಸಿನಲ್ಲಿ ತನ್ನ ಸದ್ಯದ ಕಷ್ಟಗಳನ್ನು ಮರೆತು ನಿಜಲಿಂಗಪ್ಪನವರನ್ನು ಸಾಕಿದರು. ತಾಯಿಯ ಕನಸಿಗೆ ತಕ್ಕಂತೆ ತರುಣ ನಿಜಲಿಂಗಪ್ಪ ಒಳ್ಳೆಯ ವಿದ್ಯಾರ್ಥಿಯಾಗಿ ಆ ಕಾಲದ ಶ್ರೇಷ್ಠ ಅಧ್ಯಾಪಕರ ಮಾರ್ಗದರ್ಶನದಲ್ಲಿ ಕಾನೂನು ಪದವಿ ಪಡೆದರು.

ವಕೀಲರಾಗಿ ವೃತ್ತಿಜೀವನ ಆರಂಭಿಸಿದ ನಿಜಲಿಂಗಪ್ಪನವರ ಮನಸ್ಸು ಸಹಜವಾಗಿಯೇ ಆ ಕಾಲದ ಸ್ವಾತಂತ್ರ್ಯ ಚಳುವಳಿಯ ಕರೆಗೆ ಸ್ಪಂದಿಸಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ವಕೀಲರಿಗೆ ಒಂದು ವಿಶಿಷ್ಟ ಪಾತ್ರವಿರುವುದನ್ನು ರಾಜಕೀಯ ಇತಿಹಾಸದಲ್ಲಿ ನಾವು ಗುರುತಿಸಬಹುದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರವಹಿಸಿದ ಗಾಂಧೀಜಿ, ನೆಹರು, ತಿಲಕ್, ಚಿತ್ತರಂಜನ್‌ದಾಸ್, ರಾಜಾಜಿ, ಮೊದಲಾದ ಹಿರಿಯ ನಾಯಕರೆಲ್ಲ ವಕೀಲರೇ ಆಗಿದ್ದ

ರೆಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ನಿಜಲಿಂಗಪ್ಪನವರು ಮುಂದೆ ಈ ಪರಂಪರೆಯ ಹಾದಿಹಿಡಿದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಇತಿಹಾಸದಲ್ಲಿ ನಿಜಲಿಂಗಪ್ಪನವರದು ಬಹುದೊಡ್ಡ ಹೆಸರು. ೧೯೨೪ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿಯ ಅಧಿವೇಶನದಲ್ಲಿ ಸ್ವಯಂ ಸೇವಕನಾಗಿ ಭಾಗವಹಿಸಿದ ನಿಜಲಿಂಗಪ್ಪನವರು ಮುಂದೆ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರೆಂಬುದು ಅತ್ಯಂತ ಮಹತ್ವದ ಸಂಗತಿ. ದಂಡೀಯಾತ್ರೆ, ಉಪ್ಪಿನ ಸತ್ಯಾಗ್ರಹ ಮೊದಲಾದ ಹೋರಾಟಗಳಲ್ಲಿ ಭಾಗವಹಿಸಿದ ಎಸ್. ಎನ್. ಹರ್ಡೀಕರ್ ನಾರಾಯಣರಂತಹ ಧೀಮಂತರ ಮಾರ್ಗದರ್ಶನದಲ್ಲಿ ಒಬ್ಬ ದೇಶಪ್ರೇಮಿಯಾಗಿ ರೂಪುಗೊಂಡರು. ಕ್ವಿಟ್‌ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಸೆರೆಮನೆವಾಸ ಅನುಭವಿಸಿ ಅನೇಕ ನೋವುಗಳ ನಡುವೆ ಬೆಂದು ಅಪ್ಪಟ ರಾಜಕೀಯ ಮುತ್ಸದ್ಧಿಯಾಗಿ ಬೆಳೆದರು.

ಕರ್ನಾಟಕದ ಈ ಹೆಮ್ಮೆಯ ಪುತ್ರ ಮುಂದೆ ರಾಷ್ಟ್ರ ಮಟ್ಟದ ಶ್ರೇಷ್ಠ ನಾಯಕರಾಗಿ ಪ್ರಸಿದ್ಧರಾದರು.

ಶಾಸಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಕರ್ನಾಟಕದ ಪ್ರಗತಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಿದ ನಿಜಲಿಂಗಪ್ಪನವರು ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಮಹತ್ವದ ಪಾತ್ರವಹಿಸಿ 'ಕರ್ನಾಟಕ ಏಕೀಕರಣದ ಶಿಲ್ಪಿ' ಎನಿಸಿದರು. ಕನಸು, ಕಾಣ್ಕೆಗಳ ಸಾಕಾರ ಮೂರ್ತಿಯಾದ ನಿಜಲಿಂಗಪ್ಪನವರು ತಮ್ಮ ಆಡಳಿತಾವಧಿಯಲ್ಲಿ ಕರ್ನಾಟಕದ ಬೆಳವಣಿಗೆಗೆ ಅನೇಕ ಪ್ರಗತಿಪರ ಯೋಜನೆಗಳನ್ನು ರೂಪಿಸಿದರು. ಶರಾವತಿ ವಿದ್ಯುತ್ ಯೋಜನೆ, ಮಂಗಳೂರು ಬಂದರಿನ ಪುನಾರಚನೆ, ಕೃಷ್ಣಾ ಮೇಲ್ದಂಡೆ ಯೋಜನೆ, ಅನೇಕ ಕಾರ್ಖಾನೆಗಳ ಆರಂಭ, ಗ್ರಾಮೀಣ ಸಮಾಜದ ಅನೇಕ ಸುಧಾರಣಾ ಕಾರ್ಯಕ್ರಮಗಳು, ಕೆಲವು ಉದಾಹರಣೆಗಳು.

ನಿಜಲಿಂಗಪ್ಪನವರು ನೇರ ನುಡಿಯ ಸರಳವ್ಯಕ್ತಿ. ತಾನು ನಂಬಿದ ತತ್ವಗಳಿಗಾಗಿ ಕಾಂಗ್ರೆಸ್‌ನೊಳಗಡೆಯೇ ಇದ್ದು ಅಧಿಕಾರ ಕೇಂದ್ರಿತ ಮನಸ್ಸುಗಳ ವಿರುದ್ಧ ಪ್ರಬಲ ಹೋರಾಟ ನಡೆಸಿದ್ದು ಈಗ ಇತಿಹಾಸ.

ಆಧುನಿಕ ರಾಜಕಾರಣದಲ್ಲಿ ಸರಳತೆ, ಪ್ರಾಮಾಣಿಕತೆ, ಜನಪ್ರೀತಿ, ಸೌಜನ್ಯ, ಇವು ಅಪರೂಪದ ಗುಣಗಳು. ನಿಜಲಿಂಗಪ್ಪನವರಲ್ಲಿ ಈ ಎಲ್ಲವೂ ಮೇಳೈಸಿವೆ. ಅವರ ಬದುಕಿನ ರೀತಿಯೇ ಅವರ ವ್ಯಕ್ತಿತ್ವಕ್ಕೆ ಕನ್ನಡಿ. ಸಮಕಾಲೀನ ಬದುಕಿಗೆ ಇಂಥ ವ್ಯಕ್ತಿತ್ವಗಳ ಜೀವನ ಪ್ರೇರಣೆ-ಸ್ಫೂರ್ತಿ ನೀಡುವಂತಾಗಬೇಕು. ಯುವ ಮನಸ್ಸುಗಳು ಇಂಥ ಚೇತನಗಳಿಂದ ಆಕರ್ಷಿತರಾಗುವಂತಾಗಬೇಕು. ಅಗ ಮಾತ್ರ ಗಾಂಧೀಜಿಯಂತಹವರ ಕನಸು ನನಸಾದೀತು.

●



ಎ. ಎನ್. ಮೂರ್ತಿರಾವ್

ಕಾಲ ಕೆಟ್ಟಿದೆ ಎಂಬುದು ವಯಸ್ಸಾದವರೆಲ್ಲರ ಸಾಮಾನ್ಯ ನುಡಿ. ಶತಾಯುಷಿ ಮೂರ್ತಿರಾಯರು ಮಾತ್ರ ಇದಕ್ಕೆ ಅಪವಾದ. ಮೊದಲಿಗಿಂತ ಈಗ ಜನ ಚೆನ್ನಾಗಿ ಬದುಕುತ್ತಿದ್ದಾರೆ ಎಂಬುದು ಅವರ ಖಚಿತವಾದ ನಿಲುವು. ಈ ನಿಲುವು ಮೂರ್ತಿರಾಯರ ಆರೋಗ್ಯಕರ ಮನಸ್ಸನ್ನು, ಪ್ರಗತಿಪರ ಮನೋಭಾವವನ್ನು ಸೂಚಿಸುತ್ತದೆ. ನೂರು ತುಂಬಿದ ಈ ಹಿರಿಯರು ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತ, ಮರುಳರಾಗದೆ ಯುವ ಮನಸ್ಸುಗಳನ್ನು ಅರ್ಥಮಾಡಿಕೊಳ್ಳುತ್ತ ಸಮಕಾಲೀನ ಬದುಕಿಗೆ ಸಹಜವೆಂಬಂತೆ ಸ್ಪಂದಿಸುವ ಪರಿ ಅನನ್ಯವಾದದ್ದು.

ಮೂರ್ತಿರಾಯರು ಇಡೀ ಶತಮಾನ ಬದುಕಿ ಭಾರತೀಯ ಬದುಕಿನ ಏಳು-ಬೀಳುಗಳನ್ನು ಹತ್ತಿರದಿಂದ ಕಂಡವರು. ಕಳೆದ ಶತಮಾನದಲ್ಲಾದ ಬದಲಾವಣೆಗೆ ತಮ್ಮ ಸೃಜನಶೀಲ ಪ್ರತಿಭೆಯ ಮೂಲಕ ಸ್ಪಂದಿಸಿದವರು. ಆಧುನಿಕ ನಾಗರೀಕತೆಯ ಆಕ್ರಮಣಕ್ಕೆ ಬೆಚ್ಚದೆ ಅದನ್ನು ನಮ್ಮ ಬದುಕಿಗೆ ಹೇಗೆ ಆರೋಗ್ಯಕರವಾಗಿ ಅನುಸಂಧಾನ ಮಾಡಿಕೊಳ್ಳಬಹುದು ಎಂಬ ಬಗ್ಗೆ ಸೂಕ್ಷ್ಮವಾಗಿ ಚಿಂತಿಸಿದವರು.

ಮೂರ್ತಿರಾಯರದು ಪೌರಾತ್ಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳಿಂದ ಹದಗೊಂಡ ಮನಸ್ಸು ನಮ್ಮ ಪರಂಪರೆಯನ್ನು ಚಿಕ್ಕಂದಿನಿಂದಲೂ ಪ್ರೀತಿ, ಸಂದೇಹಗಳ ಮೂಲಕ ತಮ್ಮದಾಗಿಸಿ ಕೊಳ್ಳುತ್ತಾ ಬಂದ ಮೂರ್ತಿರಾಯರು ಪಾಶ್ಚಾತ್ಯ ಸಂಸ್ಕೃತಿಯೊಡನೆ ಆಪ್ತವಾಗಿ ಒಡನಾಡಿದವರು. ಆದರೆ ಯಾವುದರ ಬಗ್ಗೆಯೂ ಮೋಹ ಬೆಳೆಸಿಕೊಳ್ಳದೆ ಚಿಕಿತ್ಸಕ ಮನೋಭಾವದಿಂದ ಅತ್ಯುತ್ತಮ ಅಂಶಗಳಿಗೆ ಒಲಿದವರು. ವೈದಿಕ ಪರಿಸರದಲ್ಲಿಯೇ ಬೆಳೆದು ಆ ಪರಿಸರದ ಅಲೌಕಿಕ ವಾತಾವರಣದ ಬಗ್ಗೆ ಆಸಕ್ತಿ ಹೊಂದಿಯೂ ದೇವರನ್ನು ಕುರಿತು ವಿಭಿನ್ನವಾಗಿ ಆಲೋಚಿಸಿದವರು. ಪರಂಪರೆ ಸೃಷ್ಟಿಸುವ ಜಡತೆ, ನಾಗರೀಕತೆಯಿಂದ ಉಂಟಾಗುವ ಸ್ವೇಚ್ಛಾಮನೋಭಾವ ಈ ಎರಡರ ಬಗ್ಗೆಯೂ ಮೂರ್ತಿರಾಯರು ತಮ್ಮ ಬದುಕಿನುದ್ದಕ್ಕೂ ಎಚ್ಚರವಹಿಸಿದವರು.

ಅತ್ಯುತ್ತಮ ಗುರುಪರಂಪರೆಯಡಿಯಲ್ಲಿ ಆದರ್ಶ ವಿದ್ಯಾರ್ಥಿಯಾಗಿದ್ದ ಮೂರ್ತಿರಾಯರು ಮುಂದೆ ಆ ಗುರುಪರಂಪರೆಯಲ್ಲೆ ಸ್ಥಾನ ಪಡೆದ ಶ್ರೇಷ್ಠ ಅಧ್ಯಾಪಕರು. ಆಧುನಿಕ ಕನ್ನಡ ಸಾಹಿತ್ಯ ಕಂಡ ಅಪರೂಪದ ಚಿಂತಕರು. ಕನ್ನಡ ಪ್ರಬಂಧ ಸಾಹಿತ್ಯದಲ್ಲಿ ಮೂರ್ತಿರಾಯರದು ಅದ್ವಿತೀಯ ಹೆಸರು. ಸಣ್ಣ ಕಥೆಗೆ ಮಾಸ್ತಿ ಇದ್ದಂತೆ ಪ್ರಬಂಧಕ್ಕೆ ಮೂರ್ತಿರಾಯರು. ಮೂರ್ತಿರಾಯರಿಗೆ ಸಾಹಿತ್ಯದಷ್ಟೇ ಪ್ರಿಯವಾದದ್ದು ಸಂಗೀತ, ಅಂತೆಯೇ ಪ್ರವಾಸ. 'ಅಪರ ವಯಸ್ಕನ ಅಮೆರಿಕಾಯಾತ್ರೆ' ಪ್ರವಾಸ ಸಾಹಿತ್ಯಕ್ಕೆ ಉತ್ತಮ ಕೊಡುಗೆ. 'ಸಂಜೆಗಣ್ಣಿನ ಹಿನ್ನೋಟ' ಪಕ್ವ ಮನಸ್ಸಿನ ಅನುಭವ ಕಥನ, 'ಪೂರ್ವ ಸೂರಿಗಳೊಡನೆ' ಆಧುನಿಕ ಮನಸ್ಸು ಪರಂಪರೆಗೆ ಮುಖಾಮುಖಿಯಾದ ಚಿಂತನೆಯ ಫಲ. 'ಆಷಾಢಭೂತಿ', 'ಚಂಡಮಾರುತ' ಉತ್ತಮ ಅನುಸೃಷ್ಟಿಗಳು.

ಪಂಪ ಪ್ರಶಸ್ತಿ ಪಡೆದ ಮೂರ್ತಿರಾಯರ 'ದೇವರು' ಕೃತಿ ಸಹೃದಯರ ಮೆಚ್ಚುಗೆಗೆ ಟೀಕೆಗೆ ಕಾರಣವಾದ ವಿಶಿಷ್ಟ ಕೃತಿ. ಮೂರ್ತಿರಾಯರು ಬರಹಕ್ಕಿಂತ ಬದುಕು ದೊಡ್ಡದು ಎಂದು ನಂಬಿದವರು. ಆ ನಂಬಿಕೆಯಿಂದ ರೂಪುಗೊಂಡ ಚಿಂತನೆಗಳನ್ನು ದೇವರು ಕೃತಿಯಲ್ಲಿ ಕಾಣಬಹುದು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ 'ಚಿತ್ರಗಳು-ಪತ್ರಗಳು' ಮೂರ್ತಿರಾಯರ ಶಬ್ದಚಿತ್ರ ಕೌಶಲಕ್ಕೆ, ತೆಳು ಹಾಸ್ಯಕ್ಕೆ, ತುಂಟತನದಿಂದ ಕೂಡಿದ ಗಂಭೀರ ಮನೋಭಾವಕ್ಕೆ ಉತ್ತಮ ನಿದರ್ಶನ.

ಇಂದಿಗೂ ಯುವ ಮನಸ್ಸುಗಳೊಡನೆ ಸಂವಾದ ನಡೆಸುವುದರಲ್ಲಿ ಉಲ್ಲಾಸ ಕಾಣುವ ಮೂರ್ತಿರಾಯರೊಂದಿಗಿನ ಒಡನಾಟವೇ ಒಂದು ವಿಶಿಷ್ಟ ಅನುಭವ.

●



ನಿಟ್ಟೂರು ಶ್ರೀನಿವಾಸರಾವ್

ಕಳೆದ ಶತಮಾನ ಕಂಡ ಮತ್ತೊಂದು ಮಹತ್ವದ ಚೇತನ ನಿಟ್ಟೂರು ಶ್ರೀನಿವಾಸರಾಯರು. ಕಳೆದ ಆಗಸ್ಟ್ ೨೪ಕ್ಕೆ ತೊಂಭತ್ತೇಳು ವಸಂತಗಳನ್ನು ಮುಗಿಸಿ ತೊಂಭತ್ತೆಂಟಕ್ಕೆ ಅಡಿಯಿಟ್ಟ ನಿಟ್ಟೂರರರು ಇಂದಿಗೂ ನಮ್ಮ ನಡುವೆ ಇರುವ ಕ್ರಿಯಾಶೀಲ ಚೇತನ. ನಗರದ ಯಾವುದೇ ಮುಖ್ಯ ಸಭೆ ಸಮಾರಂಭವಾದರೂ ಈ ಹಿರಿಯರು ಅತಿಥಿಯಾಗಿ ಅಥವಾ ಪ್ರೇಕ್ಷಕರಾಗಿ ಬಂದು ಸಭೆಯ ಕಲಾಪಗಳನ್ನು ತಮ್ಮದಾಗಿಸಿಕೊಳ್ಳುವ ಪರಿಯನ್ನು ಕಂಡಾಗ ಆಶ್ಚರ್ಯವಾಗುತ್ತದೆ. ಅವರ ಈ ಉತ್ಸಾಹ ಆಸಕ್ತಿ ನಿಟ್ಟೂರರ ನಿಡಿದಾದ ಬಾಳಿನಲ್ಲಿ ನಾವು ಕಾಣುವ ಅವರ ವ್ಯಕ್ತಿತ್ವದ ಮೂಲ ದ್ರವ್ಯಗಳು. ಸಾರ್ವಜನಿಕ ಬದುಕಿನಲ್ಲಿ ಪಾಲ್ಗೊಳ್ಳುವುದು ಸದಾ ಅವರಿಗೆ ಉತ್ಸಾಹ ತರುವ ಸಂಗತಿ. ಸಾರ್ವಜನಿಕ ಬದುಕು ಹಸನಾಗಬೇಕೆಂಬುದು ಅವರ ಆಸಕ್ತಿ.

ಇಪ್ಪತ್ತರ ದಶಕದಲ್ಲಿ ವಕೀಲರಾಗಿ ವೃತ್ತಿಜೀವನ ಆರಂಭಿಸಿದ ನಿಟ್ಟೂರರು ತಮ್ಮ ದಕ್ಷತೆ ಹಾಗೂ ಮೇಧಾವಿತನದಿಂದಾಗಿ ಅಡ್ವೊಕೇಟ್ ಜನರಲ್ ಆಗಿ, ನ್ಯಾಯಾಧೀಶರಾಗಿ, ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿ ನ್ಯಾಯಾಂಗ ಕ್ಷೇತ್ರದಲ್ಲಿ ಗಣ್ಯ ಸ್ಥಾನ ಪಡೆದವರು. ಎಲ್ಲರ ಗೌರವಕ್ಕೆ ಪಾತ್ರರಾದವರು. ನಿವೃತ್ತರಾದ ನಂತರವೂ ಸರ್ಕಾರ ಇವರ ಸೇವೆಯನ್ನು ಕಳೆದುಕೊಳ್ಳಲು ಇಚ್ಛಿಸದೆ ಕೇಂದ್ರ ಸರ್ಕಾರ ವಿಜಿಲೆನ್ಸ್ ಕಮೀಷನರ್ ಆಗಿ ನೇಮಿಸಿದ್ದು ಇವರ ಆಡಳಿತ ದಕ್ಷತೆಯನ್ನು ಸೂಚಿಸುತ್ತದೆ. ಕೆಲಕಾಲ ನಿಟ್ಟೂರರು ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲಿಯೇ ಗಾಂಧೀಜಿಯವರ ಗಾಢ ಪ್ರಭಾವಕ್ಕೆ ಒಳಗಾದ ನಿಟ್ಟೂರರು ಸರಳ ಜೀವನವನ್ನು ವ್ರತವಾಗಿ ಸ್ವೀಕರಿಸಿದವರು. ಸಾರ್ವಜನಿಕ ಬದುಕಿನ ನೆಮ್ಮದಿ ಕಾಪಾಡಲು ತಮ್ಮ ಕೈಲಾದ ಸೇವೆ ಮಾಡಬೇಕೆಂಬುದನ್ನು ಬದುಕಿನ ಧ್ಯೇಯವಾಗಿಸಿಕೊಂಡವರು. ಆದ್ದರಿಂದಲೇ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಅವರ ಅತ್ಯಂತ ಪ್ರೀತಿಯ ಕಾರ್ಯಕ್ಷೇತ್ರ. ಆರಂಭದಲ್ಲಿ ಈ ಸಂಸ್ಥೆಯ ಕಾರ್ಯಕರ್ತರಾಗಿ ನಂತರ ಗೌರವ ಕಾರ್ಯದರ್ಶಿಯಾಗಿ ಇಂದಿಗೂ

ಆ ಸಂಸ್ಥೆಯೊಡನೆ ನಿಕಟ ಸಂಬಂಧವಿಟ್ಟುಕೊಂಡು ಎಲ್ಲ ವಯಸ್ಸಿನವರೊಡನೆ ಆತ್ಮೀಯವಾಗಿ ಒಡನಾಡುತ್ತಾ ಸರಳಜೀವನಕ್ಕೆ ಮಾದರಿಯಾಗಿರುವ ನಿಟ್ಟೂರರು - ಯುವ ಮನಸ್ಸುಗಳಿಗೆ ಮಾದರಿಯೇ ಇಲ್ಲದಿರುವ ಸಂದರ್ಭದಲ್ಲಿ ಮಾದರಿಯಾಗಬಲ್ಲ ವ್ಯಕ್ತಿ.

ನ್ಯಾಯಾಧೀಶರಾದ ನಿಟ್ಟೂರರಿಗೆ ಸಾರ್ವಜನಿಕ ಕ್ಷೇತ್ರ ಅವರ ಆಸಕ್ತಿಯ ಒಂದು ಮುಖವಾದರೆ ಸಾಂಸ್ಕೃತಿಕ ಕ್ಷೇತ್ರ ಅವರ ಆಸಕ್ತಿಯ ಇನ್ನೊಂದು ಮುಖ. ೧೯೨೮ರ ವೇಳೆಗೇ ನಿಟ್ಟೂರರು ಪ್ರಕಾಶನ ಸಂಸ್ಥೆಯೊಂದನ್ನು ಆರಂಭಿಸಿ, ವೀ. ಸೀ. ಗೊರೂರು, ಸಂಸ, ಆನಂದ, ಎಂ.ವಿ.ಸೀ. ಮೊದಲಾದವರ ಕೃತಿಗಳನ್ನು ಪ್ರಕಟಿಸಿದ್ದರೆಂಬುದು ಕನ್ನಡ ಸಂಸ್ಕೃತಿಯ ಇತಿಹಾಸವನ್ನು ಬರೆಯುವವರು ಕೃತಜ್ಞತೆಯಿಂದ ನೆನಪಿಸಿಕೊಳ್ಳಬೇಕಾದ ಸಂಗತಿ. ಅವರ ಸತ್ಯಶೋಧನ ಪ್ರಕಟಣಾಲಯ ಪ್ರಕಟಣ ಪ್ರಪಂಚದ ಒಂದು ಅಪರೂಪದ ಸಂಸ್ಥೆ. ಗಾಂಧೀಜಿಯವರ ಆತ್ಮಚರಿತ್ರೆಯನ್ನು ತಮ್ಮ ಶ್ರೀಮತಿಯವರೊಂದಿಗೆ ಅನುವಾದಿಸಿ ಕನ್ನಡದಲ್ಲಿ ಮೊದಲಬಾರಿಗೆ ಪ್ರಕಾಶಿಸಿದ ಆದ್ಯರು ನಿಟ್ಟೂರರು.

ನಿಟ್ಟೂರರ ಅನುಭವ ಪ್ರಪಂಚ ವಿಸ್ತಾರವಾದುದು. ತಮ್ಮ ಕಾಲದ ಎಲ್ಲ ಕ್ಷೇತ್ರಗಳ ಶ್ರೇಷ್ಠ ಮನಸ್ಸುಗಳೊಡನೆ ನಿಟ್ಟೂರರಿಗೆ ನಿಕಟ ಒಡನಾಟವಿತ್ತು. ರಾಜಕಾರಣಿಗಳು, ಅಧಿಕಾರಿಗಳು, ಸಾಹಿತಿಗಳು, ಕಲಾವಿದರು, ಗಣ್ಯ ನಾಗರೀಕರು ಹೀಗೆ ಎಲ್ಲರೊಂದಿಗೂ ಅವರು ಸಂಬಂಧವಿರಿಸಿಕೊಂಡಿದ್ದರು. ನಿಟ್ಟೂರರ ಅನುಭವ ಬುತ್ತಿಯಲ್ಲಿ ಕರ್ನಾಟಕದ ರಾಜಕೀಯ ಸಾಂಸ್ಕೃತಿಕ ಇತಿಹಾಸವೇ ಅಡಗಿದೆ.

ನಿಟ್ಟೂರರಿಗೆ ಸಂಘಟನೆಯಲ್ಲಿಯೂ ವಿಶೇಷ ಆಸಕ್ತಿ. ಗಾಂಧೀ ಸ್ಮಾರಕ ನಿಧಿ, ಗಾಂಧೀಶಾಂತಿ ಪ್ರತಿಷ್ಠಾನ, ಕರ್ನಾಟಕ ಪ್ರಕೃತಿ ಚಿಕಿತ್ಸಾ ಪರಿಷತ್ತು, ಲೋಕ ಶಿಕ್ಷಣ ಟ್ರಸ್ಟ್, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಕರ್ನಾಟಕ ತಾಳವಾದ್ಯ ಕೇಂದ್ರ ಹೀಗೆ ಹತ್ತು ಹಲವು ಸಂಸ್ಥೆಗಳೊಡನೆ ಅವರು ಕ್ರಿಯಾತ್ಮಕ ಸಂಬಂಧವಿಟ್ಟುಕೊಂಡಿದ್ದಾರೆ. ತಮ್ಮ ಪ್ರಭಾವೀ ವ್ಯಕ್ತಿತ್ವದ ಮೂಲಕ ಆ ಸಂಸ್ಥೆಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ.

ನಿಟ್ಟೂರರ ಕರ್ತೃತ್ವ ಶಕ್ತಿ, ಹಾಗೂ ಅವರ ಸರಳ ಪ್ರಾಮಾಣಿಕ ಬದುಕಿನ ಒಂದಂಶ ಯುವ ಚೇತನಗಳೊಡನೆ ಒಂದಾಗುವುದು ಸಾಧ್ಯವಾದರೆ ಈ ಶತಮಾನದ ಭಾರತೀಯ ಬದುಕು ಹಸನಾಗುವ ಆಸೆ ಮೂಡೀತು.

●



ಎಚ್. ನರಸಿಂಹಯ್ಯ

ಹನುಮಂತಪ್ಪ ಹಾಗೂ ವೆಂಕಟಮ್ಮ ಕೋಲಾರ ಜಿಲ್ಲೆಯ ಗೌರಿಬಿದನೂರಿಗೆ ಹತ್ತು ಕಿಮೀ. ದೂರದಲ್ಲಿರುವ ಹೊಸೂರಿನ ಹಿಂದುಳಿದ ವರ್ಗಕ್ಕೆ ಸೇರಿದ ಬಡಕುಟುಂಬದ ದಂಪತಿಗಳು. ಹನುಮಂತಪ್ಪ ಕೂಲಿಮಠದ ಮೇಷ್ಟ್ರು, ವೆಂಕಟಮ್ಮ ಅನಕ್ಷರಸ್ಥೆ, ಮನೆಗೆಲಸ ಮಾಡುವ ಶ್ರಮಜೀವಿ. ಈ ದಂಪತಿಗಳಿಗೆ ಇಬ್ಬರು ಮಕ್ಕಳು; ಹಿರಿಯವನು ಮಗ, ಎರಡನೆಯವಳು ಮಗಳು.

ಹನುಮಂತಪ್ಪನವರಿಗೆ ವಿದ್ಯೆಯ ಬೆಲೆ ತಿಳಿದಿದ್ದರಿಂದ ಮಗನನ್ನು ಸರ್ಕಾರಿ ಶಾಲೆಗೆ ಸೇರಿಸಿದರು. ಹುಡುಗ ಬುದ್ಧಿವಂತ, ಕಷ್ಟಪಟ್ಟು ಓದುತ್ತಿದ್ದ, ಉಪಾಧ್ಯಾಯರ ಪ್ರೀತಿ ವಿಶ್ವಾಸಗಳಿಸಿ, ಅವರ ನೆರವು ಪಡೆದು ಮುನ್ನಡೆಯುತ್ತಿದ್ದಾಗ ತಂದೆಯ ಸಾವು. ಆದರೆ ತಾಯಿಯ ಪ್ರೀತಿಯ ಆಸರೆಯಿತ್ತು. ಹಲವರ ನೆರವಿನಿಂದ, ತನ್ನ ಸಂಕಲ್ಪ ಶಕ್ತಿಯ ಬಲದಿಂದ 'ಅನಾಥ' ಸ್ಥಿತಿಯಲ್ಲಿದ್ದರೂ ಧೃತಿಗೆಡದೆ ಗುರಿ ಸಾಧಿಸುವ ಛಲದಿಂದ ಓದು ಮುಂದುವರಿಸಿದ. ಹೊಸೂರಿನ ಆ ಹಳ್ಳಿ ಹುಡುಗನೇ ಇಂದು ನಾಡಿನ ಶಿಕ್ಷಣ ಹಾಗೂ ಸಂಸ್ಕೃತಿ ಕ್ಷೇತ್ರದಲ್ಲಿ ದೊಡ್ಡ ಹೆಸರಾಗಿ 'ಎಚ್ಚೆನ್' ಎಂದೇ ಪ್ರಸಿದ್ಧರಾಗಿರುವ ಎಚ್. ನರಸಿಂಹಯ್ಯ.

ಬದುಕಿನುದ್ದಕ್ಕೂ ಹೋರಾಟ ನಡೆಸುತ್ತಲೇ ಬೆಳೆದು ಬಂದೆನೆನ್ನುವ ಎಚ್ಚೆನ್ ಹೇಳುತ್ತಾರೆ: 'ನನ್ನ ಜೀವನವೆಲ್ಲಾ ಹೋರಾಟವೇ ಆಯಿತು. ವಿದ್ಯಾರ್ಥಿಯಾಗಿದ್ದಾಗ ನನ್ನ ಉಳಿವಿಗಾಗಿ ಆದಷ್ಟು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಬೇಕೆಂಬ ಹಟ; ನ್ಯಾಷನಲ್ ಕಾಲೇಜಿಗೆ ಸೇರಿದಾಗ ನಮ್ಮ ಕಾಲೇಜು ಎಲ್ಲಾ ಕಾಲೇಜುಗಳನ್ನು ಮೀರಿಸಲು ಪಟ್ಟ ಸತತ ಪ್ರಯತ್ನ; ಸ್ವಾತಂತ್ರ್ಯ ಚಳುವಳಿಗಳಲ್ಲಿ ಹೋರಾಟ, ಹಿಡಿದ ಎಲ್ಲಾ ಕೆಲಸಗಳನ್ನು, ಯೋಜನೆಗಳನ್ನು ಒಂದು ಕಾಲದ ಮಿತಿಯಲ್ಲಿ ಅತ್ಯಂತ ಒಪ್ಪವಾಗಿ ಪೂರೈಸಬೇಕೆಂಬ ಛಲ; ಅರ್ಥವಿಲ್ಲದ ನಂಬಿಕೆಗಳ ಸಂಪ್ರದಾಯಗಳ, ಮೂಢ ನಂಬಿಕೆಗಳ, ಪವಾಡ ಪುರುಷರ ವಿರುದ್ಧ ಜೀವನ ಪರ್ಯಂತ ಸೆಣಸಾಟ - ಹೀಗೆ ಎಚ್ಚೆನ್‌ರ ಬದುಕು ಒಂದು ರೀತಿ 'ಹೋರಾಟದ ಹಾದಿ'.

ನರಸಿಂಹಯ್ಯನವರ ಸಾಧನೆಯ ಹಿಂದಿನ ಶಕ್ತಿ- 'ಏಕಾಗ್ರತೆ' ಹಾಗೂ 'ಸರಳತೆ'. ತಮ್ಮ ಮನಸ್ಸನ್ನು ಒಂದು ನಿಶ್ಚಿತ ವ್ಯವಸಾಯದಲ್ಲಿ ದೃಢವಾಗಿ ತೊಡಗಿಸುವುದನ್ನು ಅವರು ರೂಢಿಸಿಕೊಂಡಿದ್ದಾರೆ. ಹಾಗೆಯೇ ಭೋಗಾಸಕ್ತಿಯಿಂದ ಎಚ್ಚೆನ್ ದೂರ. ಜೊತೆಗೆ ಅವರ ವ್ಯಕ್ತಿತ್ವದ ಮತ್ತೊಂದು ಅಂಶ, ಅವರ ಕ್ರಿಯಾಶೀಲತೆ. ಯಾವ ಕೆಲಸವೇ ಆಗಿರಲಿ, ಅದು ಮಹತ್ವದ್ದಾಗಿರಬಹುದು, ಸಾಮಾನ್ಯವಾದುದಾಗಿರಬಹುದು, ಸಮಾನ ಆಸಕ್ತಿ ಶ್ರದ್ಧೆಗಳಿಂದ ದುಡಿಯುವುದು ಅವರ ಸ್ವಭಾವ. ಎಷ್ಟೇ ಕಷ್ಟ ಕಾರ್ಪಣ್ಯಗಳು ಬಂದರೂ ನಿರಾಶಾವಾದಿಯಾಗದೆ, ಸಿನಿಕರಾಗದೆ ಗುರಿ ಸಾಧಿಸಿದ ಅವರ 'ಸಂಕಲ್ಪ ಬಲ' ಅನುಕರಣೀಯ. ನಿರಂತರ ಶ್ರಮ, ಅಚಲ ಆತ್ಮವಿಶ್ವಾಸ, ಏಕಾಗ್ರತೆ, ವೈಚಾರಿಕ ಮನೋಭಾವ-ನರಸಿಂಹಯ್ಯನವರ ವ್ಯಕ್ತಿತ್ವವನ್ನು ರೂಪಿಸಿದ ಪ್ರಧಾನ ಅಂಶಗಳು.

ಎಚ್. ನರಸಿಂಹಯ್ಯನವರು ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಆರಂಭಿಸಿ ವಿಶ್ವವಿದ್ಯಾಲಯದ ಉಪಕುಲಪತಿಯ ಉನ್ನತ ಅಧಿಕಾರದವರೆಗೆ ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಿದವರು. ಉಪಕುಲಪತಿಗಳಾಗಿದ್ದಾಗ ಅವರು ಮೂಢನಂಬಿಕೆಗಳ ವಿರುದ್ಧ ನಡೆಸಿದ ಹೋರಾಟ ಇಡೀ ರಾಷ್ಟ್ರದ ಗಮನ ಸೆಳೆದಿತ್ತು. ಜನರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಲು ಸತತವಾಗಿ ವಿದ್ಯಾವಂತ ವರ್ಗ ಹೋರಾಡಬೇಕೆಂಬುದು ನರಸಿಂಹಯ್ಯನವರ ಮೂಲ ಕಾಳಜಿ. ಯಾವುದೇ ದೇಶದ ಪ್ರಗತಿಯಲ್ಲಿ ನಿರಂತರ ದುಡಿಮೆ ಹಾಗೂ ವೈಚಾರಿಕ ಮನೋಭಾವ ಅತ್ಯಗತ್ಯವೆಂದು ಅವರು ಹೇಳುತ್ತಿರುತ್ತಾರೆ.

ಭೌತಶಾಸ್ತ್ರ ಪ್ರಾಧ್ಯಾಪಕರಾದ ಎಚ್ಎನ್‌ಗೆ ಎಲ್ಲವನ್ನೂ ಪ್ರಶ್ನಿಸುವ ತುಡಿತ. ಪ್ರಶ್ನಾರ್ಥಕ ಚಿಹ್ನೆ ಅವರ ವ್ಯಕ್ತಿತ್ವವನ್ನು ಪ್ರತಿನಿಧಿಸುವ ಸಂಕೇತ ಚಿಹ್ನೆ.

ಶಾಸಕರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಅವರು ವಿಶಿಷ್ಟರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅನೇಕ ಪ್ರತಿಷ್ಠಿತ ಹುದ್ದೆಗಳು ಅವರನ್ನು ಅರಸಿಬಂದಿವೆ. ಎಚ್ಚೆನ್, ಅಂಥ ಕೆಲಸವನ್ನು ನಯವಾಗಿಯೇ ನಿರಾಕರಿಸಿದ್ದಾರೆ. ಅನೇಕ ಪ್ರಶಸ್ತಿಗಳ ಮೂಲಕ ನಾಡು ಅವರನ್ನು ಗೌರವಿಸಿದೆ.

ನಗು ಮೊಗದ, ಶುದ್ಧಹಾಸ್ಯ ಪ್ರಜ್ಞೆಯುಳ್ಳ ಎಚ್ಚೆನ್, ಕುಟುಂಬದ ಮೋಹಕ್ಕೆ ಒಳಗಾಗದೆ ಸಮಾಜಕ್ಕೆ ತಮ್ಮನ್ನು ಅರ್ಪಿಸಿಕೊಂಡ ವಿಶಿಷ್ಟ ಚೇತನ.

●



ಮಹಾದೇವಿ ತಾಯಿ

ಮೂಲತಃ ನಮ್ಮದು ಪುರುಷ ಪ್ರಧಾನ ಸಮಾಜ. ಇಂತಹ ಸಮಾಜದಲ್ಲಿ ಮಹಿಳೆಯೊಬ್ಬಳು ತನ್ನ ಕೌಟುಂಬಿಕ ಪರಿಸರದಿಂದ ಹೊರಬಂದು ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಹಿಂದಿನ ದಿನಗಳಲ್ಲಿ ಕಷ್ಟ ಸಾಧ್ಯವಾದ ಸಂಗತಿಯಾಗಿತ್ತು. ಆಧುನಿಕ ಶಿಕ್ಷಣ ದೊರಕಿದಂತೆ ಈ ಪರಿಸ್ಥಿತಿ ಬದಲಾಗಿರುವುದು ನಿಜವಾದರೂ ನಮ್ಮ ಕುಟುಂಬದ ಮೂಲ ರಚನೆಯಲ್ಲಿ ಅಂತಹ ಮಹತ್ವದ ಬದಲಾವಣೆಗಳಾಗಿಲ್ಲ. ಆದರೂ ಅನೇಕ ಸ್ತ್ರೀ ಚೇತನಗಳು ನಮ್ಮ ಸಾಮಾಜಿಕ ರಚನೆಯ ವಿನ್ಯಾಸವನ್ನು ಉಲ್ಲಂಘಿಸಿ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ನಾವು ಕಾಣಬಹುದು. ಅಂತಹ ಮಹತ್ವದ ಸ್ತ್ರೀಶಕ್ತಿಗಳಲ್ಲಿ ಒಬ್ಬರು-ನಮ್ಮೊಡನಿರುವ ಮಹಾದೇವಿ ತಾಯಿ.

ಮಹಾದೇವಿ ತಾಯಿ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಕುಟುಂಬದ ಹಿನ್ನೆಲೆಯಿಂದ ಬಂದವರು. ಚಿಕ್ಕಂದಿನಲ್ಲಿಯೇ ವಿವಾಹವಾಗಿ ಆ ತರುಣದಲ್ಲೇ ವಿಧವೆಯಾಗಿ ಬದುಕಿನ ಕಟುವಾಸ್ತವವನ್ನು ಎದುರಿಸಬೇಕಾಗಿ ಬಂದ ಮಹಾದೇವಿ "ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೋ, ಹೂಬತ್ತಿ ಹೊಸೆಯಲಿಕೆ ಮೈದಳೆದಳೋ" ಎಂಬಂತೆ ಸಂಪ್ರದಾಯಬದ್ಧ ಪರಿಸರದಲ್ಲಿ ಮೂಲೆ ಹಿಡಿದು ಕೂರದೆ ಸಮಾಜಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದು ಅವರ ಬದುಕಿನಲ್ಲಾದ ಮಹತ್ವದ ತಿರುವು. 'ಪುಟ್ಟವಿಧವೆ ಮಹಾದೇವಿ'ಗೆ ಹೊಸ ಬೆಳಕು ಕಂಡದ್ದು ಮಹಾತ್ಮ ಗಾಂಧೀಜಿಯವರ ಮೂಲಕ.

೨೦ರ ದಶಕದಲ್ಲಿ ಮಹಾದೇವಿತಾಯಿ ಕರನಿರಾಕರಣ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ೧೯೩೪ರಲ್ಲಿ ಗಾಂಧೀಜಿಯವರ ಸೂಚನೆಯ ಮೇರೆಗೆ ಸೇವಾಶ್ರಮಕ್ಕೆ ಹೋಗಿ ಸೇವಾದೀಕ್ಷೆ ಸ್ವೀಕರಿಸಿದರು.

ಮಹಾದೇವಿ ತಾಯಿಯವರ ಬದುಕಿನ ಮತ್ತೊಂದು ಮಹತ್ವದ ತಿರುವೆಂದರೆ ವಿನೋಬಾಜಿ ಜೊತೆಗಿನ ಅವರ ಒಡನಾಟ. ವಿನೋಬಾರವರ ಆಪ್ತ ಕಾರ್ಯದರ್ಶಿಯಾಗಿ ೪೭ ವರ್ಷಗಳ

ದೀರ್ಘಕಾಲ ಅವರೊಡನಿದ್ದರು. ಅವರೊಡನೆ ೧೪ ವರ್ಷಗಳ ದೀರ್ಘಾವಧಿಯಲ್ಲಿ ಅಖಂಡ ಭಾರತ ಪಾದಯಾತ್ರೆ ಮಾಡಿದರು. ಭೂದಾನ, ಗ್ರಾಮದಾನ ಚಳುವಳಿಯಲ್ಲಿ ಪಾಲ್ಗೊಂಡರು. ಹೀಗೆ ಇಡೀ ಬದುಕನ್ನು ಸಮಾಜಕ್ಕೆ ಮುಡಿಪಾಗಿಟ್ಟ ಮಹತ್ವದ ಚೇತನ ಮಹಾದೇವಿ ತಾಯಿ.

ಅಂದಿನಿಂದ ಇಂದಿನವರೆಗೂ ಸಮಾಜ ಸೇವೆಯನ್ನೇ ಉಸಿರಾಗಿಸಿಕೊಂಡ ಮಹಾದೇವಿ ತಾಯಿ ತಮ್ಮ ಈ ಇಳಿವಯಸ್ಸಿನಲ್ಲಿಯೂ ನಿಷ್ಕ್ರಿಯರಾಗಿ ಮೂಲೆ ಹಿಡಿದು ಕುಳಿತಿಲ್ಲ. ಕೆಲವು ಅನಾಥ ಮಕ್ಕಳನ್ನು ತಮ್ಮ ಮಡಲಿಗೆ ಹಾಕಿಕೊಂಡು ಅವರ ಭವಿಷ್ಯವನ್ನು ರೂಪಿಸುವ ಕಾಯಕದಲ್ಲಿ ತೊಡಗಿದ್ದಾರೆ.

ಬದುಕು ಎಷ್ಟೇ ಕಹಿಯಾದರೂ, ಕಠೋರವಾದರೂ ಮನಸ್ಸು ಮುದುಡದ ಹಾಗೆ ನೋಡಿಕೊಂಡು ಸಮಾಜಕ್ಕೆ ಉಪಯುಕ್ತ ಸೇವೆ ಸಲ್ಲಿಸುತ್ತಿರುವ ಮಹಾದೇವಿತಾಯಿಯಂತಹವರ ಬದುಕು ಯುವ ಮನಸ್ಸುಗಳಿಗೆ ಅನುಕರಣೀಯವಾದದ್ದು.

●



ಸುಧಾಕರ ಚತುರ್ವೇದಿ

ಸುಧಾಕರ ಚತುರ್ವೇದಿಯವರು ಮೂರು ಶತಮಾನಗಳನ್ನು ಕಂಡ ನಮ್ಮ ನಡುವೆ ಇರುವ ಅತ್ಯಂತ ಹಿರಿಯ ಜೀವಿಗಳಲ್ಲಿ ಒಬ್ಬರು. ಹತ್ತೊಂಬತ್ತನೇ ಶತಮಾನದಲ್ಲಿ (ಮಾರ್ಚ್ ೧೮೯೭) ಹುಟ್ಟಿ ಇಪ್ಪತ್ತನೇ ಶತಮಾನವಿಡೀ ಸಾರ್ಥಕ ಬಾಳುವೆ ನಡೆಸಿ ಇಪ್ಪತ್ತೊಂದನೇ ಶತಮಾನಕ್ಕೂ ಕಾಲಿಟ್ಟಿದ್ದಾರೆ. ಎಂತಹ ಅಪೂರ್ವ ಬದುಕು!

ಬದುಕಿರುವುದಷ್ಟೇ ಮುಖ್ಯವೇ? ಸುಧಾಕರ ಚತುರ್ವೇದಿಯವರು ತಮ್ಮ ಬದುಕನ್ನು ಸಾರ್ಥಕಗೊಳಿಸಿದ್ದಾರೆ ಎಂಬುದು ಅವರ ಬಗೆಗಿನ ನಮ್ಮ ಗೌರವಕ್ಕೆ ಕಾರಣ.

ಚತುರ್ವೇದಿಯವರು ಅಪರೂಪದ ಶ್ರೇಷ್ಠ ವಿದ್ವಾಂಸರು. ಕನ್ನಡ, ಸಂಸ್ಕೃತ, ಇಂಗ್ಲೀಷ್, ಹಿಂದಿ, ಪಂಜಾಬಿ, ಮರಾಠಿ, ಬಂಗಾಳಿ ಮೊದಲಾದ ಭಾಷೆಗಳಲ್ಲಿ ಪರಿಣತಿ ಪಡೆದವರು. ವೇದ ಸಾಹಿತ್ಯವನ್ನು ಆಳವಾಗಿ ಶ್ರದ್ಧೆಯಿಂದ ಅಭ್ಯಾಸ ಮಾಡಿದವರು. ಚತುರ್ವೇದಿಯವರ ವೈಶಿಷ್ಟ್ಯವೆಂದರೆ ನಾಲ್ಕು ವೇದಗಳಲ್ಲೂ ಪಾಂಡಿತ್ಯ ಪಡೆದಿರುವುದು. ವೇದಾಧ್ಯಯನ ಮಾಡಿದ ವಿದ್ವಾಂಸರು ನಮ್ಮಲ್ಲಿ ಸಾಕಷ್ಟು ಜನರಿದ್ದಾರೆ. ಆದರೆ ಚತುರ್ವೇದಗಳಲ್ಲೂ ಪಾಂಡಿತ್ಯ ಪಡೆದ ವಿರಳ ವಿದ್ವಾಂಸರು ಚತುರ್ವೇದಿಗಳು.

ಸಂಸ್ಕೃತ ವಿದ್ವಾಂಸರೆಂದರೆ ಸಂಪ್ರದಾಯ ಬದ್ಧರು ಎಂಬುದು ಸಾಮಾನ್ಯ ತಿಳುವಳಿಕೆ. ಆದರೆ ಸುಧಾಕರ ಚತುರ್ವೇದಿಗಳು ಪ್ರಗತಿಶೀಲ ಮನೋಭಾವದ ಆಧುನಿಕ ಚಿಂತಕರು. ಸಾವಿರಾರು ಅಂತರ್ಜಾತಿಯ ವಿವಾಹಗಳ ನೇತೃತ್ವ ವಹಿಸಿ ಸಾಮಾಜಿಕ ಬದಲಾವಣೆಗೆ ಅವರು ಕಾರಣ ರಾಗಿದ್ದಾರೆಂಬುದನ್ನು ನಾವಿಲ್ಲಿ ಕೃತಜ್ಞತೆಯಿಂದ ಸ್ಮರಿಸಬೇಕು.

ಚತುರ್ವೇದಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಸೆರೆಮನೆ ವಾಸ ಅನುಭವಿಸಿ ಅಲ್ಲಿ ನಾಡಿನ ನೇತಾರರೊಡನೆ ಒಡನಾಡಿಯಾಗಿದ್ದು ವಿದ್ವತ್ತಿನ ಜೊತೆಗೆ ಸಾಮಾಜಿಕ ಕಾಳಜಿಯನ್ನು ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡರು.

ಪಂಡಿತ ಸುಧಾಕರ ಚತುರ್ವೇದಿಯವರು ಕನ್ನಡ, ಸಂಸ್ಕೃತ, ಇಂಗ್ಲೀಷ್, ಹಿಂದಿ ನಾಲ್ಕೂ ಭಾಷೆಗಳಲ್ಲಿ ಗ್ರಂಥ ರಚಿಸಿದ್ದಾರೆ. ಇದುವರೆಗೆ ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿರುವ ಚತುರ್ವೇದಿಯವರು ವೇದ, ಉಪನಿಷತ್ತು, ಯೋಗ, ಧರ್ಮಮೀಮಾಂಸೆ, ತತ್ತ್ವ ಹೀಗೆ ಬೇರೆಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಕೃತಿ ರಚಿಸಿದ್ದಾರೆ.

ಇಂತಹ ಹಿರಿಯರ ವ್ಯಕ್ತಿತ್ವದ ಬೆಳಕು ನಮ್ಮ ಯುವ ಮನಸ್ಸುಗಳಿಗೂ ಹಾಯಲಿ.

●



ಎಂ. ಸಿ. ಮೋದಿ

ಯಾವುದೇ ಸಮಾಜದಲ್ಲಾದರೂ ಶಿಕ್ಷಣ ಹಾಗೂ ವೈದ್ಯಕೀಯ ವೃತ್ತಿಗಳು ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿವೆ. ಪ್ರಾಚೀನ ಕಾಲದಲ್ಲಿ ವೈದ್ಯ ಹಾಗೂ ಗುರು ಇವರನ್ನು ಅತ್ಯಂತ ಪೂಜ್ಯಭಾವದಿಂದ ಕಾಣುತ್ತಿದ್ದರು. ಒಬ್ಬರು ಜೀವದಾನ ಮಾಡುತ್ತಿದ್ದರೆ ಮತ್ತೊಬ್ಬರು ವ್ಯಕ್ತಿತ್ವದಾನ ಮಾಡುತ್ತಿದ್ದಾರೆ. ಹೀಗಾಗಿ ಸಮಾಜದಲ್ಲಿ ಇವರಿಬ್ಬರಿಗೂ ಅತ್ಯುನ್ನತ ಸ್ಥಾನವಿತ್ತು.

ಕಾಲ ಕಳೆದಂತೆ ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ವ್ಯಾಪಾರೀ ಮನೋಭಾವ ಪ್ರಬಲವಾಗುತ್ತಾ ಹೋಯಿತು. ಪರಿಣಾಮವಾಗಿ ಶಿಕ್ಷಣ ಹಾಗೂ ವೈದ್ಯಕೀಯ ಕ್ಷೇತ್ರಗಳು ವಾಣಿಜ್ಯೀಕರಣ ಗೊಂಡವು. ನಿಸ್ವಾರ್ಥ ಸೇವೆ ಎಂಬುದು ಹಿಂದೆ ಸರಿಯಿತು.

ಇಂತಹ ಸಂದರ್ಭದಲ್ಲಿಯೂ ವೈದ್ಯಕೀಯ ವೃತ್ತಿಯ ಘನತೆಯನ್ನು ಎತ್ತಿಹಿಡಿದ ಶ್ರೇಷ್ಠ ವ್ಯಕ್ತಿಗಳಲ್ಲೊಬ್ಬರು ಮೋದಿಯವರು. ಸ್ವಾತಂತ್ರ್ಯ ಸಂಗ್ರಾಮ ಉತ್ಕರ್ಷತೆ ಪಡೆಯುತ್ತಿದ್ದ ಕಾಲದಲ್ಲಿ ಮೋದಿಯವರು ತಮ್ಮ ಬಾಲ್ಯವನ್ನು ಕಳೆದರು. ಹೀಗಾಗಿ ಸಹಜವಾಗಿಯೇ ಅವರಲ್ಲಿ ದೇಶಾಭಿಮಾನ, ದೇಶಸೇವೆ ಮೊದಲಾದ ಪರಿಕಲ್ಪನೆಗಳು ವ್ಯಕ್ತವಾದವು. ಗಾಂಧೀಜಿಯವರ ಪ್ರಭಾವಕ್ಕೆ ತಮ್ಮ ತಾರುಣ್ಯದಲ್ಲಿ ಒಳಗಾದ ಮೋದಿಯವರು ಅಮೇರಿಕಾದಲ್ಲಿ ಉನ್ನತ ವಿದ್ಯಾಭ್ಯಾಸ ಪಡೆದರೂ ಅಲ್ಲಿಯೇ ನೆಲೆನಿಲ್ಲದೆ ತಾಯ್ನಾಡಿಗೆ ಮರಳಿದರು. ಜನಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು.

ಮೋದಿಯವರು ಕಳೆದ ಶತಮಾನ ಕಂಡ ನೇತ್ರ ಶಸ್ತ್ರಚಿಕಿತ್ಸಾ ತಜ್ಞ. ತಮ್ಮ ವೃತ್ತಿ ಬದುಕಿನಲ್ಲಿ ಅವರು ಲಕ್ಷಾಂತರ ಮಂದಿಗೆ ಕಣ್ಬೆಳಕು ನೀಡಿದ್ದಾರೆ. ಮೋದಿಯವರ ಮಹತ್ವದ ಸಾಧನೆಯೆಂದರೆ ಅಂಧತ್ವ ನಿವಾರಣೆಯನ್ನು ಅವರು ಒಂದು ಚಳುವಳಿಯಾಗಿ ರೂಪಿಸಿದರು. ಸಂಚಾರಿ ನೇತ್ರ ಚಿಕಿತ್ಸಾಲಯ ಹಾಗೂ ಸಾಮೂಹಿಕ ಉಚಿತ ನೇತ್ರ ಚಿಕಿತ್ಸೆ ಮೊದಲಾದ

ಪ್ರಗತಿಪರವಾದ ಯೋಜನೆಗಳನ್ನು ಹಮ್ಮಿಕೊಂಡು ರೋಗಿಗಳ ಬಳಿಗೆ ತಾವೇ ಹೋದರು, ಅವರಿಗೆ ಚಿಕಿತ್ಸೆ ನೀಡಿ, ಆರೈಕೆ ಮಾಡುವ ಮೂಲಕ ಅವರ ಬದುಕಿಗೆ ಬೆಳಕಾದರು.

ಮೋದಿ ಸಾಮಾನ್ಯ ಜನರ ಡಾಕ್ಟರ್. ಅವರ ಸೇವೆಯನ್ನು ಪಡೆದವರಲ್ಲಿ ನಾಡಿನ ಅತಿಗಣ್ಯ ವ್ಯಕ್ತಿಗಳಿರುವಂತೆಯೇ ಲಕ್ಷಾಂತರ ದೀನದಲಿತರಿದ್ದಾರೆ. ಒಂದು ಅಂದಾಜಿನ ಪ್ರಕಾರ ೪೦ ಲಕ್ಷ ಜನರ ಕಣ್ಣುಗಳನ್ನು ಪರೀಕ್ಷಿಸಿ ಸಲಹೆ ನೀಡಿದ್ದಾರೆ. ೪ ಲಕ್ಷಕ್ಕಿಂತಲೂ ಅಧಿಕ ಜನರಿಗೆ ನೇತ್ರ ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ಇದೇನು ಸಾಮಾನ್ಯ ವಾದ ಸಾಧನೆಯಲ್ಲ.

ತಮ್ಮ ನಂತರವೂ ಈ ಚಳುವಳಿ ಮುಂದುವರೆಯಬೇಕೆಂಬ ಅಪೇಕ್ಷೆಯಿಂದ ಮೋದಿ ಯವರು ಸುಸಜ್ಜಿತವಾದ ಕಣ್ಣಿನ ಆಸ್ಪತ್ರೆಯೊಂದನ್ನು ತೆರೆದು ಉಚಿತ ಚಿಕಿತ್ಸೆಗೆ ಅಲ್ಲಿ ವ್ಯವಸ್ಥೆ ಮಾಡಿದ್ದಾರೆ.

ಮೋದಿಯವರಿಗೆ ಸರ್ಕಾರ, ಸಂಘ ಸಂಸ್ಥೆಗಳ ಅನೇಕ ಪ್ರಶಸ್ತಿಗಳು ಸಂದಿವೆ. ನಾಡಿನ ಜನತೆ ಅವರನ್ನು ಗೌರವಿಸಿದೆ. ಆದರೆ ಎಲ್ಲದ್ದಕ್ಕಿಂತ ಹಿರಿದಾದ ಪ್ರಶಸ್ತಿ ವೃತ್ತಿಯಲ್ಲಿ ಅವರು ಪಡೆದ ಧನ್ಯತೆ, ಸಾಮಾನ್ಯ ಜನರ ಕೃತಜ್ಞತೆ.

●



ಎಂ. ಪಿ. ಎಲ್. ಶಾಸ್ತ್ರಿ

ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣದಲ್ಲಿ 'ಶಿಕ್ಷಣ'ದ ಪಾತ್ರ ಹಿರಿದು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಬಹಳ ಮನ್ನಣೆ ಪಡೆದಿದ್ದ ಈ ಕ್ಷೇತ್ರ ಸ್ವಾತಂತ್ರ್ಯಾನಂತರ ಕ್ರಮೇಣ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಇಂದು ನೆಪ ಮಾತ್ರಕ್ಕಾಗಿ ಉಳಿದಿರುವ ಕ್ಷೇತ್ರವಾಗಿದೆ. ದೇಶದ ಭವಿತವ್ಯವನ್ನು ರೂಪಿಸುವಲ್ಲಿ ಶಿಕ್ಷಣದ ಮಹತ್ವವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಯಿತು. ಇದಕ್ಕೆ ಅಧಿಕಾರ ಕೇಂದ್ರಿತ ಮನಸ್ಸಿನ ರಾಜಕಾರಣಿಗಳು ಮೂಲ ಕಾರಣ. ಸರ್ಕಾರದಿಂದ ಅವಜ್ಞತೆಗೆ ತುತ್ತಾದ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಗುಣಮಟ್ಟ ತರಲು ಶ್ರಮಿಸುತ್ತಿರುವವರು ಖಾಸಗಿ ವಿದ್ಯಾ ಸಂಸ್ಥೆಗಳವರು. ಇವರಿಂದಲೇ ಗಮನಾರ್ಹ ಸಾಧನೆಯಾಗಿದೆ ಎಂಬುದೂ ಸಹ ಬಹಳ ಮುಖ್ಯವಾದ ಸಂಗತಿ. ಇಂತಹ ಒಂದು ಸಂಸ್ಥೆಯ ರೂವಾರಿ ಪ್ರೊ. ಎಂ. ಪಿ. ಎಲ್. ಶಾಸ್ತ್ರಿ.

ಪ್ರೊ. ಎಂ. ಪಿ. ಎಲ್. ಶಾಸ್ತ್ರಿ ಈ ಶತಮಾನದಲ್ಲಿ ನಮ್ಮ ನಾಡು ಕಂಡ ಒಬ್ಬ ಉತ್ತಮ ಶಿಕ್ಷಣ ತಜ್ಞ. ಮೌಲ್ಯಾಧಾರಿತ ಶಿಕ್ಷಣವನ್ನು ನೀಡುವುದರೊಂದಿಗೆ ವಿದ್ಯಾರ್ಥಿಯ ವ್ಯಕ್ತಿತ್ವ ಬಹುಮುಖಿಯಾಗಿ ಬೆಳೆಯುವಂತೆ ಮಾಡಬೇಕು ಎಂಬುದನ್ನು ನಂಬಿದಂತಹವರು. ಶಿಕ್ಷಣ ಕ್ಷೇತ್ರಕ್ಕೂ ಇವರ ಮನೆತನಕ್ಕೂ ಬಿಡದ ನಂಟು. ಶಾಸ್ತ್ರಿಗಳು ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯ ಹಿನ್ನೆಲೆಯಲ್ಲಿ ಅವರ ಪರಿಸರದ ಪಾತ್ರ ಹಿರಿದು. ಸನಾತನ ಧರ್ಮದ ಪರಿಚಯ ಮತ್ತು ಪರಿಸರಗಳ ನಡುವೆ ಇವರ ಬಾಲ್ಯ ಅರಳಿತು. ತಾತನವರಾದ ವಿದ್ವಾನ್ ನರಹರಿ ಶಾಸ್ತ್ರಿಗಳ ಸಂಸ್ಕೃತ ಗುರುಕುಲದಲ್ಲಿಯೇ ಇವರ ವಿದ್ಯಾಭ್ಯಾಸ ಮೊದಲಾಯಿತು. ಇಲ್ಲಿನ ಪರಿಸರ ಅವರ ಭವಿತವ್ಯದ ಹಾದಿಗೆ ದಾರಿ ದೀಪವಾಯಿತು. ಮುಂದೆ ನ್ಯಾಷನಲ್ ಹೈಸ್ಕೂಲಿನಲ್ಲಿ ಓದುವಾಗ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಅಣಿಯಾದರು. ರಾಷ್ಟ್ರದ ಎಲ್ಲಾ ಪ್ರಮುಖ ನಾಯಕರುಗಳೊಂದಿಗೆ ಸ್ವಯಂ ಸೇವಕರಾಗಿ ಓಡಾಡುವ ಅವಕಾಶ ದೊರೆಯಿತು. ಸೈಮನ್ ಕಮಿಷನ್ ಖಂಡನೆ ಮತ್ತು ಅಂಕೋಲಾ ಸತ್ಯಾಗ್ರಹಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಈ ದೇಶಪ್ರೇಮವೇ ಮುಂದೆ ಅವರು ತಮ್ಮ ಶಾಲೆಯ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಜಾಗೃತ ವಾಗಿಸುವಲ್ಲಿ ಪ್ರೇರಣೆಯಾಯಿತು. ಮೈಸೂರಿನ ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ಜೀವನದಲ್ಲಿ ದೊರೆತ ಎ. ಆರ್. ವಾಡಿಯಾ, ಜೆ. ಸಿ. ರಾಲೋ, ಬಿ. ಎಂ. ಶ್ರೀ, ಟಿ. ಎಸ್. ವೆಂಕಣ್ಣಯ್ಯ ಇಂತಹ ಪ್ರಾಚಾರ್ಯರುಗಳ ಮಾರ್ಗದರ್ಶನ ಮತ್ತು ಡಿ.ವಿ.ಜಿ., ಬೇಂದ್ರೆ, ಕಾರಂತ, ಅಡಿಗ, ಜಿ. ಪಿ. ರಾಜರತ್ನಂರಂತಹ ಸಾಹಿತಿಗಳ ಸ್ನೇಹ ಅವರ ವ್ಯಕ್ತಿತ್ವ ಬೆಳೆಯುವಲ್ಲಿ ಸಹಕಾರಿಯಾಯಿತು.

ಸಂಸ್ಕೃತದಲ್ಲಿ ಎಂ.ಎ. ಪದವಿ ಪಡೆದ ನಂತರ ಶಿಕ್ಷಕರಾಗಿ ತಮ್ಮನ್ನು ಶಿಕ್ಷಣ ಕ್ಷೇತ್ರಕ್ಕೆ ಅರ್ಪಿಸಿಕೊಂಡರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ, ವಿಧಾನ ಪರಿಷತ್ತಿನಲ್ಲಿ ಶಿಕ್ಷಕ ಕ್ಷೇತ್ರದ ಪ್ರತಿನಿಧಿ ಸದಸ್ಯರಾಗಿ ಅವರು ಮಾಡಿರುವ ಕೆಲಸ ಗಮನಾರ್ಹವಾದುದು. ಶಿಕ್ಷಣ ಕ್ಷೇತ್ರದೊಂದಿಗಿನ ಈ ನಿರಂತರ ಒಡನಾಟದ ಫಲವಾಗಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಬಲ್ಲ, ವಿದ್ಯಾರ್ಥಿಯ ಸಾಂಸ್ಕೃತಿಕ ವ್ಯಕ್ತಿತ್ವವನ್ನು ರೂಪಿಸುವ ಶಿಕ್ಷಣ ಸಂಸ್ಥೆಯೊಂದನ್ನು ರೂಪಿಸುವ ಕನಸು ಕಂಡರು. ಈ ಕನಸನ್ನು ನನಸಾಗಿಸುವಲ್ಲಿ ಕೈಗಾರಿಕೋದ್ಯಮಿ ಜಿ.ಎ. ಆಚಾರ್ಯ, ವಕೀಲ ಎಂ. ಚಿನ್ನಸ್ವಾಮಿ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ಬಿ. ಆರ್. ಸುಬ್ಬರಾವ್ ನೆರವಾದರು. ಇವರ ಸಾಂಘಿಕ ಪ್ರಯತ್ನದಿಂದ ಸ್ಥಾಪನೆಯಾದ ಮೈಸೂರು ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಎಂ.ಇ.ಎಸ್. ಕಾಲೇಜು ಆರಂಭವಾಯಿತು. ತಮ್ಮೆಲ್ಲಾ ಚೈತನ್ಯವನ್ನು ಇದಕ್ಕಾಗಿ ಧಾರೆ ಎರೆದು ಈ ಸಂಸ್ಥೆಯನ್ನು ಬೆಳೆಸಿದರು. ಅವರ ಕನಸಿನ ಸಸಿ ಚಿಗುರೊಡೆದು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಮರದ ಆಶ್ರಯದಲ್ಲಿ ವಿದ್ಯಾರ್ಥಿಗಳ ಭವಿಷ್ಯ ರೂಪಿತವಾಗುತ್ತಿದೆ. ಈ ಕಾಲೇಜಿನ 'ಕಲಾವೇದಿ' ಸಾಂಸ್ಕೃತಿಕ ಸಂಘದ ಚಟುವಟಿಕೆಗಳು ಗಮನಾರ್ಹವಾದುವು. ವಿದ್ಯಾರ್ಥಿಯ ಸಾಂಸ್ಕೃತಿಕ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಈ ಸಂಸ್ಥೆ ಬಹುವಾಗಿ ಶ್ರಮಿಸುತ್ತಿದೆ. ಇಂದು ನಾಡಿನ ಉತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಇದೂ ಒಂದೆನಿಸಿದೆ.

ಶಾಸ್ತ್ರಿಗಳು ಕೇವಲ ಶಿಕ್ಷಣ ತಜ್ಞರಷ್ಟೇ ಅಲ್ಲದೆ ಸಾಹಿತಿಗಳೂ ಸಹ. ಪಟಾಕಿ, ದೇವರಲೀಲೆ, ನಂದಿದುರ್ಗ ಮುಂತಾದ ಕೃತಿಗಳನ್ನು ರಚಿಸಿರುವರು. ಶೃಂಗೇರಿ ಮಠದ 'ತತ್ತ್ವಾಲೋಕ' ಎಂಬ ದಾರ್ಶನಿಕ ದ್ವೈಮಾಸಿಕದ ಸಂಪಾದಕರು. ಶಿಕ್ಷಣ ಕ್ಷೇತ್ರದಲ್ಲಿನ ಇವರ ಸಾಧನೆಯಿಂದಾಗಿ ೧೯೮೫ರ ರಾಜ್ಯೋತ್ಸವ ಪ್ರಶಸ್ತಿ ಪಡೆದವರು.

"ಯಾವ ನೆಲ, ಯಾವ ನೀರು, ಯಾವ ಬೆಳಕಿನ ಸಹಾಯದಿಂದ ನಾವು ಬೆಳೆದಿರುತ್ತೀವೋ ಆ ನೆಲ, ಆ ನೀರು, ಆ ಬೆಳಕಿನ ಜನರೊಂದಿಗೆ ನಾವಿರಬೇಕು. ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಬೇಕು. ಅವರಿಗೆ ತನ್ನಿಂದಾದ ಸೇವೆಯನ್ನು ಮಾಡಬೇಕು. ಅದಕ್ಕಿಂತ ಬೇರೊಂದು ಸಂಪತ್ತಿಲ್ಲ, ವಿದೇಶದ ಸಂಪತ್ತೂ ಸಂಪತ್ತಲ್ಲ" ಎಂಬ ಆದರ್ಶವನ್ನು ಒಪ್ಪಿ ನಡೆದ ಪ್ರೊ. ಎಂ. ಪಿ. ಎಲ್. ಶಾಸ್ತ್ರಿಗಳ ಬದುಕು ಇಂದು ನಮಗೆ ಮಾದರಿಯಾಗಿದೆ.

●



ಆರ್. ಕೆ. ಶ್ರೀಕಂಠನ್

ಕಲಾವಿದನ ಬದುಕು ಒಬ್ಬ ತಪಸ್ವಿಯ ಬದುಕಿದ್ದ ಹಾಗೆ. ಕಲೆ ಒಲಿಯವುದು ಸಾಧಕನಿಗೆ ಮಾತ್ರ. ಯಾವುದೇ ಕಲೆಯಾಗಲೀ ತಾನು ಒಲಿಯುವ ಮುನ್ನ ಅಪಾರ ಸಾಧನೆಯನ್ನು, ತಾಳ್ಮೆಯನ್ನು ನಿರಂತರ ಶ್ರಮವನ್ನು ಬೇಡುತ್ತದೆ. ಅಂತಹ ಕಲೆಗಳಲ್ಲಿ ಸಂಗೀತವೂ ಒಂದು. ಸಂಗೀತದ ಜೀವನಾಡಿಯನ್ನು ಹಿಡಿಯ ಬಯಸುವ ಸಾಧಕ ತನ್ನ ಇಡೀ ಬಾಳನ್ನು ಸಂಗೀತಕ್ಕೆ ಧಾರೆಯೆರೆಯಬೇಕಾಗುತ್ತದೆ. ಹೀಗೆ ಇಡೀ ವ್ಯಕ್ತಿತ್ವವನ್ನು ಅರ್ಪಿಸಿಕೊಂಡು ಸಾಧಿಸಿದ ಸಾಧನೆ ಅನುಪಮವಾದದ್ದು. ಆರ್. ಕೆ. ಶ್ರೀಕಂಠನ್ ಹೀಗೆ ತಮ್ಮ ಬದುಕನ್ನೇ ಸಂಗೀತಕ್ಕೆ ಮುಡಿಪಾಗಿಟ್ಟ ಶ್ರೇಷ್ಠ ಸಾಧಕ ಮಹಾನ್ ಕಲಾವಿದ.

ನಮ್ಮಲ್ಲಿ ಎರಡು ಬಗೆಯ ಸಂಗೀತ ಪ್ರಸಿದ್ಧವಾದುದು. ಒಂದು ಕರ್ನಾಟಕ ಸಂಗೀತ ಮತ್ತೊಂದು ಹಿಂದೂಸ್ತಾನಿ ಸಂಗೀತ. ಸಂಗೀತದಲ್ಲಿ ತಮ್ಮನ್ನು ತೊಡಗಿಸಿಕೊಂಡ ಶ್ರೇಷ್ಠ ಸೃಜನಶೀಲ ಪ್ರತಿಭೆಗಳು ಆರಿಸಿಕೊಂಡದ್ದು ಹಿಂದೂಸ್ತಾನೀ ಸಂಗೀತ ಪ್ರಕಾರವನ್ನು. ಮಲ್ಲಿಕಾರ್ಜುನ ಮನ್ಸೂರ್, ಭೀಮಸೇನ ಜೋಷಿ, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು ಮೊದಲಾದವರು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಕೀರ್ತಿ ಬೆಳಗಿಸಿದವರು. ಆದರೆ ಮೊದಲೇ ಹೇಳಿದಂತೆ ಇವರ ಸಾಧನೆ ಹಿಂದೂಸ್ತಾನಿ ಸಂಗೀತದಲ್ಲಿ.

ನಮ್ಮ ಆರ್. ಕೆ. ಶ್ರೀಕಂಠನ್ ಕರ್ನಾಟಕ ಸಂಗೀತಕ್ಕೆ ಒಲಿದವರು. ಅದರಲ್ಲಿ ಶ್ರೇಷ್ಠ ಸಾಧನೆ ಮಾಡಿದವರು. ಕರ್ನಾಟಕ ಸಂಗೀತಕ್ಕೆ ಘನತೆ ತಂದು ಕೊಟ್ಟಂತಹವರು.

ಸುಮಾರು ಆರು ದಶಕಗಳಿಂದ ಸಂಗೀತ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡ ಶ್ರೀಕಂಠನ್ ದೇಶ ವಿದೇಶಗಳಲ್ಲಿ ಸಂಗೀತ ಕಛೇರಿ ನಡೆಸಿ ಜನಪ್ರೀತಿ ಪಡೆದವರು. ಕನ್ನಡದ ಕಂಪನ್ನು ಎಲ್ಲೆಡೆ ಹರಡಿದವರು.

ಕರ್ನಾಟಕ ಸಂಗೀತದಲ್ಲೂ ನಮ್ಮ ಸಂಗೀತಗಾರರು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುವುದು

ತಮಿಳು, ತೆಲುಗು ಕೃತಿಗಳನ್ನು. ಆರ್. ಕೆ. ಶ್ರೀಕಂಠನ್ ಕರ್ನಾಟಕ ಸಂಗೀತಕ್ಕೆ ಅನನ್ಯವೆನ್ನಬಹುದಾದ ಕೃತಿಗಳನ್ನು ನೀಡಿದ ದಾಸರ ಕೀರ್ತನೆಗಳನ್ನು ಆಯ್ದುಕೊಂಡು ಕರ್ನಾಟಕ ಸಂಗೀತದಲ್ಲಿ ಕೀರ್ತನೆಗೆ ಮಹತ್ವದ ಸ್ಥಾನ ದೊರಕಿಸಿಕೊಟ್ಟರು. ಈ ದೃಷ್ಟಿಯಿಂದ ಅವರಿಗೆ ನೀಡಿರುವ ಕನಕ ಪುರಂದರ ಪ್ರಶಸ್ತಿ ಹಾಗೂ ಹರಿದಾಸ ಪ್ರಶಸ್ತಿಗಳು ಅರ್ಥಪೂರ್ಣ.

ಆರ್. ಕೆ. ಶ್ರೀಕಂಠನ್ ಶ್ರೇಷ್ಠ ಸಾಧಕರು ಮಾತ್ರವಲ್ಲ ಅತ್ಯುತ್ತಮ ಗುರುವೂ ಹೌದು. ಸಂಗೀತ ಪರಂಪರೆ ನಿರಂತರ ಮುಂದುವರಿಯಬೇಕೆಂಬ ಹಂಬಲವಿರುವ ಶ್ರೀಕಂಠನ್ ಅನೇಕ ಶಿಷ್ಯರನ್ನು ರೂಪಿಸಿದ್ದಾರೆ. ಕರ್ನಾಟಕಸಂಗೀತ ನಾಡಿನಲ್ಲಿ ಜನಪ್ರಿಯತೆ ಪಡೆಯಲು ಶ್ರಮಿಸಿದ್ದಾರೆ.

ಸತತ ಸಾಧನೆಯಿಂದ ಒಬ್ಬ ವ್ಯಕ್ತಿ ಯಾವ ಕ್ಷೇತ್ರದಲ್ಲೇ ಆಗಲಿ ಎಷ್ಟು ಎತ್ತರಕ್ಕೆ ಏರಬಹುದೆಂಬುದಕ್ಕೆ ನಮ್ಮ ನಡುವಿನ ಹಿರಿಯ ಕಲಾವಿದ ಶ್ರೀಕಂಠನ್ ಅತ್ಯುತ್ತಮ ನಿದರ್ಶನ.

●

ಎಸ್. ಕೆ. ಕರೀಂಖಾನ್

ಭಾರತದ ಸ್ವಾತಂತ್ರ್ಯಕ್ಕಾಗಿ ಮತಭೇದವಿಲ್ಲದೆ ಹೋರಾಟ ನಡೆಸಿದ ವಿಶಿಷ್ಟ ಭಾರತೀಯ ಚೇತನಗಳಲ್ಲಿ ಕರೀಂಖಾನ್‌ರವರೂ ಒಬ್ಬರು.

ಕರೀಂಖಾನರ ಪೂರ್ವಜರು ಆಫ್‌ಘಾನಿಸ್ತಾನದಿಂದ ಭಾರತಕ್ಕೆ ವಲಸೆ ಬಂದಂಥವರು. ಇವರ ತಂದೆ ಸೈನಿಕರಾಗಿದ್ದು ದೇಶದ ರಕ್ಷಣೆಗಾಗಿ ಹೋರಾಟ ಮಾಡಿದಂಥವರು. ತಂದೆಯಂತೆಯೇ ಮಗನೂ ಸಹ ಅಪ್ರತಿಮ ಹೋರಾಟಗಾರ. ಆದರೆ ರಣರಂಗದಲ್ಲಲ್ಲ, ಸಾಂಸ್ಕೃತಿಕ ರಂಗದಲ್ಲಿ.

ಕರೀಂಖಾನರಿಗೆ ಜನ ಸಮುದಾಯದ ಬಗ್ಗೆ ವಿಶೇಷ ಆಸಕ್ತಿ. ನಮ್ಮೆಲ್ಲ ಚಟುವಟಿಕೆಗಳು ಸಾಮಾನ್ಯ ಜನರ ಬದುಕನ್ನು ಹಸನುಗೊಳಿಸಲು ಕಾರಣವಾಗಬೇಕೆಂಬುದು ಅವರ ಕಾಳಜಿ. ಹೀಗಾಗಿಯೇ ಕರೀಂಖಾನ್ ಜಾನಪದ ಕ್ಷೇತ್ರಕ್ಕೆ ಹೆಚ್ಚಾಗಿ ಒಲಿದರು. ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿ ಅವರು ಗಮನಾರ್ಹ ಕೆಲಸ ಮಾಡಿದ್ದಾರೆ. 'ಜಾನಪದ ಶ್ರೀ' ಪ್ರಶಸ್ತಿ ಪಾತ್ರರಾದ ಕರೀಂಖಾನ್ ತಮ್ಮ ಮಧುರ ಕಂಠದಿಂದ ಜನಪದ ಗೀತೆಗಳನ್ನು ಪ್ರಚಾರ ಮಾಡುತ್ತ ಸಂತೋಷ ಹಂಚುವುದರ ಜೊತೆಗೆ ಅರಿವನ್ನು ಮೂಡಿಸಲೂ ಕಾರಣರಾಗಿದ್ದಾರೆ.

ಕರೀಂಖಾನ್ ಚಲನಚಿತ್ರ ಕ್ಷೇತ್ರದಲ್ಲೂ ಅಪಾರ ಸೇವೆ ಸಲ್ಲಿಸಿದ್ದಾರೆ. ಚಲನಚಿತ್ರ ಸಾಹಿತ್ಯದ ಅಧ್ಯಯನ ಮಾಡುವುದು ಸಾಧ್ಯವೇ ಇಲ್ಲ. ಅಷ್ಟರ ಮಟ್ಟಿಗೆ ಆ ಕ್ಷೇತ್ರಕ್ಕೇ ಅವರ ಕೊಡುಗೆ ಗಮನಾರ್ಹವಾದದ್ದು.

ಮೊದಲಿನಿಂದಲೂ ರಾಜಕೀಯ ಕ್ಷೇತ್ರದೊಡನೆ ನಿಕಟ ಸಂಬಂಧವಿದ್ದ ಕರೀಂಖಾನರು ಅಪೇಕ್ಷಿಸಿದ್ದರೆ ಏನೆಲ್ಲ ಅಧಿಕಾರ ಪದವಿ ಪಡೆಯಬಹುದಿತ್ತು. ವೈಭವದ ಲೋಲುಪ ಜೀವನ ನಡೆಸಬಹುದಿತ್ತು. ಆದರೆ ಅವರು ಅದನ್ನೆಲ್ಲ ನಿರಾಕರಿಸಿ ಸರಳ ಬದುಕನ್ನು ತಮ್ಮ ಬದುಕಿನ ರೀತಿಯಾಗಿಸಿಕೊಂಡರು.

ಕರೀಂಖಾನ್ ಬದುಕಿನುದ್ದಕ್ಕೂ ಬಡತನದ ಒಡನಾಡಿ. ಈ ಹಿರಿಯ ಜೀವಕ್ಕೆ ಈ ಇಳಿವಯಸ್ಸಿನಲ್ಲಿಯೂ ತಮ್ಮದೇ ಆದ ಒಂದು ಗೂಡಿಲ್ಲವೆಂಬುದು ಇವರ ವ್ಯಕ್ತಿತ್ವವನ್ನು, ಮನೋಭಾವವನ್ನು ಸೂಚಿಸುತ್ತದೆ.

●



ಎನ್. ಲಕ್ಷ್ಮಣರಾವ್

ಎನ್. ಲಕ್ಷ್ಮಣರಾಯರು ಕರ್ನಾಟಕದ ಆಡಳಿತ ಕ್ಷೇತ್ರದ ಗೌರವಾನ್ವಿತ ಹಿರಿಯ ಅಧಿಕಾರಿಗಳಲ್ಲಿ ಒಬ್ಬರು. ಸಾಮಾನ್ಯವಾಗಿ ಅಧಿಕಾರದಲ್ಲಿರುವವರು ಜನಪ್ರಿಯವಾಗುವುದು ಸುಲಭ ಸಾಧ್ಯವಲ್ಲ. ಅದರಲ್ಲೂ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡಿಯೂ ಎಲ್ಲರ ಪ್ರೀತಿ ಗೌರವಗಳನ್ನು ಗಳಿಸಿಕೊಳ್ಳುವುದು ಸುಲಭವಲ್ಲ. ಆದರೆ ಎನ್. ಲಕ್ಷ್ಮಣರಾವ್ ಕರ್ನಾಟಕ ಆಡಳಿತ ಇತಿಹಾಸದಲ್ಲಿ ದಕ್ಷತೆ ಹಾಗೂ ಜನಪ್ರಿಯತೆಗೆ ಹೆಸರಾದ ಅಪರೂಪದ ಅಧಿಕಾರಿ.

ಸುಸಂಸ್ಕೃತ ಕುಟುಂಬದ ಹಿನ್ನೆಲೆಯಿಂದ ಬಂದ ಲಕ್ಷ್ಮಣರಾಯರು ಚಿಕ್ಕಂದಿನಿಂದಲೇ ಪ್ರತಿಭಾವಂತರೆಂದು ಹೆಸರಾದವರು. ಕೇಂದ್ರ ಸರ್ಕಾರದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಿ ರಾಷ್ಟ್ರೀಯ ಆಡಳಿತ ಸೇವಾವಲಯವನ್ನು ಪ್ರವೇಶಿಸಿದ ಲಕ್ಷ್ಮಣರಾಯರು ಕರ್ನಾಟಕ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದವರು, ವಿಭಾಗಾಧಿಕಾರಿಯಾಗಿ, ರಾಜ್ಯ ಸಾರಿಗೆಯ ಜನರಲ್ ಮ್ಯಾನೇಜರ್ ಆಗಿ, ವರಮಾನ ಇಲಾಖೆಯ ಹಿರಿಯ ಅಧಿಕಾರಿಯಾಗಿ, ಜಿಲ್ಲಾಧಿಕಾರಿಯಾಗಿ ಹೀಗೆ ವೈವಿಧ್ಯಮಯ ಹುದ್ದೆಗಳಲ್ಲಿ ಸಮರ್ಥವಾಗಿ ಕೆಲಸ ಮಾಡಿ ದಕ್ಷ ಅಧಿಕಾರಿಯೆಂದು ಹೆಸರು ಪಡೆದರು. ಆದರೆ ಲಕ್ಷ್ಮಣರಾಯರು ಮೊದಲು ದೆಹಲಿ ಕಾರ್ಪೋರೇಶನ್ ಕಮೀಷನರ್ ಆಗಿ ನಂತರ ಬೆಂಗಳೂರು ನಗರಸಭೆಯ ಆಡಳಿತಾಧಿಕಾರಿಯಾಗಿ ನಿರ್ವಹಿಸಿದ ಜವಾಬ್ದಾರಿ ಉಲ್ಲೇಖನೀಯವಾದುದು.

ಲಕ್ಷ್ಮಣರಾಯರ ವ್ಯಕ್ತಿತ್ವದಲ್ಲಿ ನಾವು ಗುರ್ತಿಸುವುದು ಕೇವಲ ಒಬ್ಬ ದಕ್ಷ ಆಡಳಿತಾಧಿಕಾರಿಯನ್ನು ಮಾತ್ರವಲ್ಲ, ಜೊತೆಗೆ ಸಾರ್ವಜನಕ ಬದುಕನ್ನು ಹಸನುಗೊಳಿಸಬೇಕೆಂಬ ಒಬ್ಬ ಸಾಮಾಜಿಕ ಚಿಂತಕನನ್ನು. ಹೀಗಾಗಿಯೇ ಅವರು ಕೈಗೊಂಡ ಅನೇಕ ಯೋಜನೆಗಳು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾದಂತಹವು "Man cannot live by bread alone" ಎಂಬ Spenderನ ಮಾತಿನಂತೆ ನಾಗರೀಕರ ಸುಸಂಸ್ಕೃತ ಬದುಕಿಗೆ ಅಗತ್ಯವಾದ ಸವಲತ್ತುಗಳನ್ನು

ಕಲ್ಪಿಸುವಲ್ಲಿ ಲಕ್ಷ್ಮಣರಾಯರು ಆಸಕ್ತಿ ವಹಿಸಿದರು. ಅವರ ಕಾಲದಲ್ಲಿ ಬೆಂಗಳೂರಿನ ಕೆಲವು ಬಂಜರು ಪ್ರದೇಶ ಉದ್ಯಾನವನಗಳಾಗಿ ಮಾರ್ಪಟ್ಟವು. ಕುಡಿಯುವ ನೀರಿನ ಸೌಲಭ್ಯ, ಒಳ ಚರಂಡಿಯ ವ್ಯವಸ್ಥೆ ಸುಧಾರಣೆಗೊಂಡವು. ನಗರ ನೈರ್ಮಲ್ಯವನ್ನು ಕಾಪಾಡುವಲ್ಲಿ ನಾಗರೀಕ ಪ್ರಜ್ಞೆ ಮೂಡಿಸುವಲ್ಲಿ ಲಕ್ಷ್ಮಣರಾಯರು ವಿಶೇಷವಾಗಿ ಶ್ರಮಿಸಿದ್ದಾರೆ.

ನಿವೃತ್ತಿಯ ನಂತರವೂ ಲಕ್ಷ್ಮಣರಾವ್ ವಿಶ್ರಾಂತಿ ಜೀವನದ ಕ್ಲಬ್ ಸಂಸ್ಕೃತಿಯನ್ನು ನಿರಾಕರಿಸಿ ಸಾರ್ವಜನಿಕ ಸಂಘ ಸಂಸ್ಥೆಗಳೊಡನೆ ತಮ್ಮನ್ನು ತೊಡಗಿಸಿಕೊಂಡು ನಿರಂತರವಾಗಿ ದುಡಿಯುತ್ತಿರುವ ಅಪರೂಪದ ಆಡಳಿತಾಧಿಕಾರಿ. ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿನ ವಿಕೃತ ಬೆಳವಣಿಗೆಯ ಬಗ್ಗೆ ಲಕ್ಷ್ಮಣರಾಯರಿಗೆ ಸದಾ ಆತಂಕ. ಉದ್ಯಾನ ನಗರಿಯೆಂಬ, ಹವಾನಿಯಂತ್ರಿತ ನಗರಿ ಎಂದು ಕೀರ್ತಿ ಪಡೆದ ಬೆಂಗಳೂರಿನ ಇಂದಿನ ಅವಸ್ಥೆಯ ಬಗ್ಗೆ ಹಳಹಳಿಸುತ್ತ ಕೂರದೆ ಸಾರ್ವಜನಿಕ ಸಂಘಟನೆಗಳ ಮೂಲಕ ಎಚ್ಚರ ಮೂಡಿಸುತ್ತಾ ಬೆಂಗಳೂರಿನ ಜೀವನ ಸಹ್ಯವಾಗುವಂತೆ ಮಾಡಲು ಶ್ರಮಿಸುತ್ತಿರುವ ಹಿರಿಯ ಜೀವಿ ಎನ್. ಲಕ್ಷ್ಮಣರಾವ್.

ಈ ಸಮಾಜದಿಂದ ನಾನು ಪಡೆದದ್ದೆಷ್ಟು. ಸಮಾಜಕ್ಕೆ ನಾನು ನೀಡಿದ್ದೆಷ್ಟು ಎಂಬ ಪ್ರಶ್ನೆಯನ್ನು ತಮ್ಮ ಜೀವನದಲ್ಲಿ ಮತ್ತೆ ಮತ್ತೆ ಕೇಳಿಕೊಳ್ಳುತ್ತಾ ಈ ಸಮಾಜದ ಋಣ ತೀರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ಲಕ್ಷ್ಮಣರಾಯರಂತವರಿಂದ ಯುವ ಮನಸ್ಸುಗಳು ಕಲಿಯುವುದು ಸಾಕಷ್ಟಿದೆ.

●



ಸತೀಶ್ ಧವನ್

ಭಾರತ ಕಂಡಿರುವ ಪ್ರತಿಭಾವಂತ ವಿಜ್ಞಾನಿಗಳಲ್ಲಿ ಸತೀಶ್‌ಧವನ್ ಒಬ್ಬರು. ಭಾರತೀಯ ಪ್ರತಿಭೆಗಳು ವಿದೇಶ ಪ್ರಯಾಣ ಮಾಡುತ್ತಿರುವ ಈ ದಿನಗಳಲ್ಲಿ ಭಾರತದ ಅಭಿವೃದ್ಧಿಗೇ ತಮ್ಮೆಲ್ಲ ಪ್ರತಿಭೆಯನ್ನು ಧಾರೆಯೆರೆಯುವ ಮೂಲಕ ಶ್ರೇಷ್ಠ ಭಾರತೀಯರೆನಿಸಿರುವ ಸತೀಶ್‌ಧವನ್‌ರವರು ನಿಜಕ್ಕೂ ಭಾರತದ ಆಸ್ತಿ.

ಸೆಪ್ಟೆಂಬರ್ ೨೫, ೧೯೨೦ರಂದು ಕಾಶ್ಮೀರದ ಶ್ರೀನಗರದಲ್ಲಿ ಜನಿಸಿದ ಇವರು ೧೯೩೮ರಲ್ಲಿ ಬಿ.ಎ. ಪದವಿಯನ್ನು, ೧೯೪೧ರಲ್ಲಿ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನು, ೧೯೪೪ರಲ್ಲಿ ಬಿ.ಇ. ಪದವಿಯನ್ನು ಗಳಿಸಿದರು. ಸಾಹಿತ್ಯದ ವಿದ್ಯಾರ್ಥಿಯಾದ ಇವರು ಒಲಿದದ್ದು ತಾಂತ್ರಿಕ ಕ್ಷೇತ್ರವನ್ನು, ಮೆಕ್ಯಾನಿಕಲ್ ಇಂಜಿನಿಯರ್ ಆದ ನಂತರ ಅಷ್ಟಕ್ಕೆ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸದೆ ಉನ್ನತ ವ್ಯಾಸಂಗಕ್ಕಾಗಿ ಯು.ಎಸ್. ಎ.ಗೆ ತೆರಳಿ 'ಏರೋನಾಟಿಕಲ್ ಇಂಜಿನಿಯರಿಂಗ್'ನಲ್ಲಿ ಎಂ.ಎಸ್. ಪದವಿಯನ್ನು ಪಡೆದರು. ೧೯೫೧ರಲ್ಲಿ ಅದೇ ಕ್ಷೇತ್ರದಲ್ಲಿ ಪಿ.ಎಚ್.ಡಿ. ಪದವಿಯನ್ನು ಗಳಿಸಿ ಬಹುಪಾಲು ಭಾರತೀಯ ಪದವೀಧರರಂತೆ ಅಲ್ಲಿಯೇ ತಮ್ಮ ವೃತ್ತಿಜೀವನವನ್ನು ಗುರುತಿಸಿಕೊಳ್ಳದೆ ಸ್ವದೇಶಕ್ಕೆ ಮರಳಿದರು. ೧೯೫೧ರಿಂದ ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನಲ್ಲಿ ತಮ್ಮ ಸಂಶೋಧನೆಯನ್ನು ಕೈಗೊಂಡು ಅನೇಕ ಉತ್ತಮವಾದ ಸಾಧನೆಗಳನ್ನು ಮಾಡಿದ್ದಾರೆ. ಭಾರತ ಸರ್ಕಾರದ ಬಾಹ್ಯಾಕಾಶ ಇಲಾಖೆಯಲ್ಲಿ ಅಧ್ಯಕ್ಷರಾಗಿ ೧೯೮೪ರವರೆಗೆ ಆ ಇಲಾಖೆಯನ್ನು ಎಲ್ಲ ಆಧುನಿಕ ತಂತ್ರಜ್ಞಾನದೊಂದಿಗೆ ವಿಶ್ವಮಟ್ಟದಲ್ಲಿ ಬೆಳೆಸಿದ ಕೀರ್ತಿ ಇವರಿಗೆ ಲಭಿಸುತ್ತದೆ. ಇಂದು ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಳು ಮತ್ತು ಪಡೆದಿರುವ ಆತ್ಮವಿಶ್ವಾಸದ ಹಿಂದೆ ಸತೀಶ್‌ಧವನ್‌ರವರ ಶ್ರದ್ಧಾಪೂರ್ಣವಾದ ಶ್ರಮವಿದೆಯೆಂಬುದನ್ನು ಮರೆಯುವಂತಿಲ್ಲ.

ಇವರ ಪ್ರತಿಭೆಯನ್ನು ಪಡೆಯದ ಸಂಸ್ಥೆಗಳೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಅನೇಕ ವಿಜ್ಞಾನ

ಮತ್ತು ತಂತ್ರಜ್ಞಾನ ಕೇಂದ್ರಗಳಲ್ಲಿ ಅದು ಸ್ವದೇಶದ್ದಾಗಿರಲಿ ವಿದೇಶದ್ದಾಗಿರಲಿ ಎರಡೂ ಕಡೆ ನಿರಂತರವಾಗಿ ಇಂದಿನವರೆಗೂ ಅತಿಥಿ ಪ್ರಾಧ್ಯಾಪಕರಾಗಿ, ಸಮಿತಿಗಳ ಅಧ್ಯಕ್ಷರಾಗಿ, ಸದಸ್ಯರಾಗಿ, ತಾಂತ್ರಿಕ ಸಲಹೆಗಾರರಾಗಿ ಧವನ್‌ರವರು ಸೇವೆ ಸಲ್ಲಿಸುತ್ತಿದ್ದಾರೆ. 'ಅಟಾಮಿಕ್ ಎನರ್ಜಿ, ಎಲೆಕ್ಟ್ರಾನಿಕ್ಸ್, ಡಿಫೆನ್ಸ್ ಮತ್ತು ಮುಖ್ಯವಾಗಿ ಸ್ಪೇಸ್ ರೀಸರ್ಚ್ ಈ ಕ್ಷೇತ್ರಗಳಲ್ಲಿ ಇವರು ನೀಡಿರುವ ಸೇವೆ ಗಣನೀಯವಾದದ್ದು.

ಇವರ ಈ ಸಾಧನೆಗೆ ಭಾರತ ಸರ್ಕಾರ ೧೯೬೬ರಲ್ಲಿ 'ಪದ್ಮಶ್ರೀ' ಪ್ರಶಸ್ತಿಯನ್ನು, ೧೯೭೧ರಲ್ಲಿ 'ಪದ್ಮಭೂಷಣ' ಪ್ರಶಸ್ತಿಯನ್ನು, ೧೯೮೧ರಲ್ಲಿ 'ಪದ್ಮವಿಭೂಷಣ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅಮೇರಿಕಾದ ಕ್ಯಾಲಿಫೋರ್ನಿಯಾ ತಾಂತ್ರಿಕ ಸಂಸ್ಥೆ ಅಲ್ಯುಮಿನಿ ಅವಾರ್ಡ್‌ನ್ನು ೧೯೬೯ರಲ್ಲೇ ನೀಡಿದೆ. ಆರ್ಯಭಟ ಪ್ರಶಸ್ತಿ, ಕರ್ನಾಟಕ ಸರ್ಕಾರದ ಪ್ರಶಸ್ತಿ ಹೀಗೆ ಹತ್ತು ಹಲವು ಪ್ರಶಸ್ತಿಗಳು ಸಂದಿವೆ. ಅನೇಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು. ಗೌರವ ಡಾಕ್ಟರೇಟ್ ಪದವಿಯನ್ನು ನೀಡಿವೆ.

ಏರೋನ್ಯಾಟಿಕ್ ತಾಂತ್ರಿಕ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿರುವ ಸತೀಶ್‌ಧವನ್‌ರವರು ಈಗಲೂ ಭಾರತದ ಸ್ಪೇಸ್ ಕಮೀಷನ್‌ನಲ್ಲಿ ಸದಸ್ಯರಾಗಿ, ಬೆಂಗಳೂರಿನ 'ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್'ನಲ್ಲಿ ಛೇರ್‌ಮೆನ್‌ರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

●

ಎಚ್. ಎಲ್. ನಾಗೇಗೌಡ

ಜಾನಪದ ಜಗತ್ತಿನಲ್ಲಿ ಎಚ್. ಎಲ್. ನಾಗೇಗೌಡ ಅವರದು ಬಹುದೊಡ್ಡ ಹೆಸರು. ದೇಶವನ್ನು ಕಟ್ಟುವ ಜನ ನಾಡ ಹಿರಿಮೆಯನ್ನು ಯುವ ಮನಸ್ಸಿನ ಮುಂದೆ ಮೊದಲು ಕಟ್ಟುವ ಕೆಲಸ ಮಾಡಬೇಕು. ನಮ್ಮ ನಾಡಿನ ಹಿರಿಮೆಯನ್ನು ನಾವೇ ಗೌರವಿಸದಿದ್ದರೆ ನಮ್ಮ ಬದುಕು ದೊಡ್ಡದಾಗುವುದಾದರೂ ಹೇಗೆ? ಪರಂಪರೆಯೆನ್ನುವುದು ವರ್ತಮಾನವನ್ನು ಅರ್ಥಪೂರ್ಣ ಗೊಳಿಸುವ ಪ್ರಮುಖ ದ್ರವ್ಯ. ಈ ಹಿನ್ನೆಲೆಯಲ್ಲಿ ನಾಗೇಗೌಡರು ಪರಂಪರೆಯನ್ನು ಒಂದು ರೀತಿಯಲ್ಲಿ ಪುನರ್ ನಿರ್ಮಿಸುತ್ತಿದ್ದಾರೆ. ಜಾನಪದ ಲೋಕ ಇಂತಹ ಪರಂಪರೆಯ ಕೇಂದ್ರ.

ನಾಗೇಗೌಡರು ರೈತ ಕುಟುಂಬದಲ್ಲಿ ಜನಿಸಿದವರು. ಬಯಲು ಸೀಮೆಯ ಬದುಕಿನ ಬವಣೆಗಳ ನಡುವೆಯೇ ಬೆಳೆದ ಇವರು ನಾಡಿನ ದಕ್ಷ ಅಧಿಕಾರಿಗಳಲ್ಲಿ ಒಬ್ಬರಾಗಿ ಹೆಸರು ಮಾಡಿದವರು. ಅಧಿಕಾರದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುವ ನಾಗೇಗೌಡರು ಜಿಲ್ಲಾಧಿಕಾರಿಯಾಗಿ, ಲೇಬಲ್ ಕಮೀಷನರ್‌ರಾಗಿ, ಸರ್ವೇ ಇಲಾಖೆಯ ಮುಖ್ಯಾಧಿಕಾರಿಯಾಗಿ, ಲೋಕಸೇವಾ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ನಾಗೇಗೌಡರ ವ್ಯಕ್ತಿತ್ವಕ್ಕೆ ಮೂರು ಮುಖ. ಅಧಿಕಾರಿಯಾಗಿ, ಸಾಹಿತಿಯಾಗಿ, ಜಾನಪದ ತಜ್ಞರಾಗಿ ಅವರು ಪ್ರಸಿದ್ಧರಾಗಿದ್ದಾರೆ. 'ದೊಡ್ಡಮನೆ' ಅವರ ಮಹತ್ವಾಕಾಂಕ್ಷೆಯ ಕಾದಂಬರಿ. ಬಯಲು ಸೀಮೆಯ ಬದುಕನ್ನು ತನ್ನೆಲ್ಲ ವಿವರಗಳೊಂದಿಗೆ ಚಿತ್ರಿಸುವ ಈ ಕೃತಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಗಮನಿಸಬೇಕಾದಂತಹುದು. ಅವರ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳಂತೂ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ. ಅನೇಕ ಜಾನಪದ ಸಂಗ್ರಹಗಳನ್ನು ನಾಗೇಗೌಡರು ಪ್ರಕಟಿಸಿದ್ದಾರೆ.

ನಾಗೇಗೌಡರ ಕನಸು ಕಲ್ಪನೆಗಳು ಸಾಕಾರ ರೂಪ ಪಡೆದದ್ದು ಜಾನಪದ ಲೋಕದ ಸ್ಥಾಪನೆಯಲ್ಲಿ. ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಜಾನಪದ ಲೋಕ ನಾಡಿನಲ್ಲೇ

ವಿಶಿಷ್ಟವಾದಂತಹುದು. ತಮ್ಮ ಬದುಕಿನುದ್ದಕ್ಕೂ ಸಂಗ್ರಹಿಸಿದ ಅಪರೂಪದ, ವೈವಿಧ್ಯಮಯ ಜಾನಪದ ವಸ್ತುಗಳನ್ನು ವೈಜ್ಞಾನಿಕ ಹಿನ್ನೆಲ್ಲೆಯಲ್ಲಿ ಇಲ್ಲಿ ಪ್ರದರ್ಶಿಸಿದ್ದಾರೆ.

ಇದು ಕೇವಲ ವಸ್ತುಸಂಗ್ರಹಾಲಯ ಮಾತ್ರವಲ್ಲ, ಸಂಶೋಧನಾ ಕೇಂದ್ರವೂ ಆಗಬೇಕೆಂಬುದು ನಾಗೇಗೌಡರ ಹಂಬಲ. ಹೀಗಾಗಿ ಇಲ್ಲಿ ಸಂಶೋಧಕರಿಗೆ ಉಪಯೋಗ ವಾಗುವಂತ ಉತ್ತಮ ಗ್ರಂಥಭಂಡಾರ, ಆಡಿಯೋ-ವಿಡಿಯೋ ಕ್ಯಾಸೆಟ್‌ಗಳು, ಧ್ವನಿ ಮುದ್ರಿಕೆಗಳು, ಜನಪದ ಕಲಾಪ್ರದರ್ಶನ ಹೀಗೆ ಜಾನಪದ ಅಧ್ಯಯನ ಕೇಂದ್ರವಾಗಿ ಇದನ್ನು ರೂಪಿಸಿದ್ದಾರೆ. ಕರ್ನಾಟಕದ ಈ ಜಾನಪದ ಲೋಕ ವಿಶ್ವದ ಜಾನಪದ ಅಧ್ಯಯನ ಕೇಂದ್ರಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಾಗೇಗೌಡರ ಕನಸು ಕರ್ತೃತ್ವ ಶಕ್ತಿ ಯುವ ಮನಸ್ಸುಗಳಿಗೆ ಅನುಕರಣೀಯವಾದುದು.

●

ಶತಮಾನದ ಹಿರಿಯರಿಗೆ ನಮನ ಶೇಷಾದ್ರಿಪುರಂ ಕಾಲೇಜು ಯುವಮನಸ್ಸುಗಳಿಗೆಂದೇ ರೂಪಿಸಿದ ವಿಶೇಷ ಕಾರ್ಯಕ್ರಮ. ನಮ್ಮ ಹಿರಿಯರ ವ್ಯಕ್ತಿತ್ವದ ಪರಿಚಯ ಯುವಮನಸ್ಸುಗಳಿಗಾಗಬೇಕು, ಆ ಮೂಲಕ ಅವರು ತಮ್ಮ ಬದುಕು ವ್ಯಕ್ತಿತ್ವಗಳನ್ನು ರೂಪಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಹಿರಿಯರ ಈ ಪರಿಚಯ ಪುಸ್ತಕ ರೂಪುಗೊಂಡಿದೆ.